## MOTION *re*: SCARCITY CONDITIONS PREVAILING IN CERTAIN PARTS OF THE STATE

(*Debate continued*)

Sri S. S. SHETTAR (Hubli).—I have sent a motion. But I have not received any reply.

Mr. SPEAKER.—The member has given notice of a substantive motion. But I found that the motion has not been properly worded. Therefore I have not accepted it.

Sri S. S. SHETTAR.—In what terms the Speaker is going to permit me to move that ? I do not know it. We have to close this debate. But nothing is coming out.

Rule 279 of the Rules of Procedure does not contemplate refusing any motion totally. On the other hand, the Speaker will have to permit the members to move the motion and there is no question of refusing the substantive motion at all. The rule reads as follows :

> "A motion that the policy or situation or statement or any other matter be taken into consideration shall not be put to the vote of the Assembly, but the Assembly sh ll proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion in appropriate terms to be approved by the Speaker and the vote of the Assembly shall be taken on such motion."

It has to be approved by the Speaker. I want to know whether it has been approved.

Mr. SPEAKER.—No. It has not been approved.

Sri S. S. SHETTAR.—It cannot be refused totally.

Mr. SPEAKER.—It is not in appropriate terms.

Sri S. S. SHETTAR.—If a motion is not passed, nothing comes out of a discussion of seven long days. If we do not pass a resolution, then what for is this discussion ? If my motion is not couched in proper terms the Speaker can direct another Member to move a substantive motion with appropriate words. Even the hon. Chief Minister himself can move a substantive motion and you can put it to the vote of the House. If a substantive motion is not passed, the whole discussion held so far will not be useful.

Mr. SPEAKER.—May I know from the hon. Chief Minister whether he proposes to move any substantive motion, which may be put to the vote of the House ?

Sri VEERENDRA PATIL (Chief Minister).—There is no need for that because I am going to reply now. After my reply, I am confident the entire House will be satified by whatever I am going to say by way of reply to the debate. I do not think any substantive motion is necessary for this purpose. That is why I myself moved the motion that the scarcity conditions existing in certain areas of the State and the relief measures adopted and to be adopted, be taken into consideration. The House has discussed it.

Sri S. S. SHETTAR.—I have to submit that it is not a question of being satisfied with the reply of the Chief Minister. It is a question of satisfying ourselves where exactly the mistake lies and pointing it out. Supposing the mistake is with the Central Government ; supposing our State Government has not utilised the funds at its disposal or supposing our State Government is unable to utilise the funds allotted by the Centre, by a Resolution we have to direct these two bodies to discharge their respective duties legally and lawfully in order to meet the requirements of the present situation. Therefore, I am requesting the Chair to see that a substantive motion is moved in the proper form he deems fit. Otherwise everything will be left in chaos. We will not be able to follow what has ultimately happened in this House if no motion is carried out.

Mr. SPEAKER.—I shall read the second part of Rule 279 to which a reference is made.—

> "... no further question shall be put at the conclusion of the debate at the appointed hour unless a member moves a substantive motion in appropriate terms to be approved by Speaker and the vote of the Assembly shall be taken on such motion."

Unless such a motion is brought in appropriate terms and until after it is approved by the Speaker, there can be no question of putting it to the vote of the House. Now the Motion moved by the hon. Member Sri Shettar is :

> "This House is of the opinion that the Central Study Team ought to have taken into consideration the grave situation in Mysore State due to the existing famine condition in more than half of the State and it should have recommended the allocation of funds according to the needs of this State.
>
> "Therefore a Commission may be appointed to reassess the grave situation due to drought condition in the State to find out a permanent and effective solution, in eradicating the evils of drought hits, and to request the Central Government to come to the aid of the Mysore Government in fighting this evil with all devotion."

I do not think that the words used in the first part of the Motion by the hon. Member Mr. Shettar are appropriate because they cast

(MR. SPEAKER)

some reflection upon the Central Study Team and express an opinion that they did not do a particular thing. We have no material before us to come to such inference. There is no material before us to say that some thing was expected to be done by the Team and that has not been done by them. Let us know from the Hon'ble Chief Minister what the Central Study Team has proposed, what is the assessment made by them and what are the measures to be taken to give relief to the people affected by scarcity and famine conditions After hearing the Chief Minister, if a Substantive Motion is moved under the Rules in appropriate terms without casting reflections on anybody, the Chair will have no objection at all to permit it and put the same to the vote of the House.

Sri M. S. KRISHNAN (Malleswaram).—With due respect to what the Chair has said, I want to say a few words on this point. It is very clear from the Chief Minister's statement that the necessary amount of assistance that ought to have been given to our State is not forthcoming. The hon Chief Minister himself has stated that the State required something more—a lot more than what is given by the Centre. A sum of about Rs. 8 crores was suggested by the Governmet for carrying out scarcity relief programmes but the Government of India have given only about Rs. 2 crores. In the circumstances, the money allotted by the Centre does not meet the situation. None of us want to cast aspersions against any Minister or the Centre or somebody. But it is very necessary to pass a substantive motion incorporating the conclusions arrived at by this House to meet the present grave situation. Instead of that, supposing the Chief Minister, in his reply, answers the various points that have been raised by the hon. Members of this House, that would not be sufficient. This House has to state clearly in a motion how serious is the situation, what should be the Central assistance to meet it and how much of the assistance asked for has not come, etc., whether there is any lacuna in the measures taken and what steps should be suggested to tide over the situation. These are all the aspects which we have to think, consider and incorporate in a resolution and pass it. The hon. Chief Minister himself could bring forward such a substantive motion provided we are taken into confidence. In my view, a substantive motion should be moved; it is very necessary to pass it.

Mr. SPEAKER.—As I already said, the motion of Hon. Member Sri Shettar is not in proper terms. Any other Member may move a motion in appropriate terms; I shall permit it. But in the meanwhile, the hon. Chief Minister may proceed with his reply.

Sri S. S. SHETTAR.—You could send a reply to my motion.

Sri M. NAGAPPA.—Why not the Chief Minister himseif move the motion ?

Mr. SPEAKER.—Can I compel anybody ? How can the Chair compel an hon. Member to move the motion ?

Sri M. NAGAPPA.—The hon. Chief Minister may take the sense of the House and move a substantive motion. He may take the House into confidence regarding the present situation and move it himself.

Mr. SPEAKER.—I shall be indeed very happy if the Hon. Member could persuade the Chief Minister to do that. For that matter, any hon. Member can come up with an appropriate motion in which case I have no discretion to refuse permission to it; I shall put it to the Vote of the House. There is no difficulty about it but let it be given in appropriate form. I cannot compel any Member to do a particular thing.

2-00 P.M.

Sri S. S. SHETTAR.—Whether a substantive motion is placed before the Speaker for consideration it is not approved on the basis that it is not in appropriate form. You say you cannot admit it because it is not in appropriate form. Therefore, I request the Chair to move an appropriate motion.

Mr. SPEAKER.—Does the Hon'ble Member want the Chair to move it? I shall be obliged to the Hon'ble member if he quotes the rule under which the Chair can move a substantive motion.

I request the Hon'ble member to come forward with a substantive motion.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಸಾಮಾನ್ಯವಾಗಿ ಇಂಥ ವಿಷಯದಲ್ಲಿ ಚರ್ಚೆ ನಡೆಯಬೇಕೆಂದಾಗ ಆ ವಿಷಯವನ್ನು ಒಂದು ಮೋಷನ್ ರೂಪದಲ್ಲಿ ತಂದು ಅದರ ಮೇಲೆ ಚರ್ಚೆಯನ್ನು ನಡೆಸಿ ಸಭೆಯ ಮತವನ್ನು ತೆಗೆದುಕೊಂಡು, ಸಭೆಯ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಇದು ಸಾಮಾನ್ಯ ಪದ್ಧತಿ. ಈಗಲಾದರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಒಂದು ಮೋಷನ್ ತಂದು ಸಭೆಯ ಅಭಿಪ್ರಾಯ ಹೇಗಿದೆ ಎಂದು ತಿಳಿದುಕೊಂಡು ಕೇಂದ್ರ ಸರ್ಕಾರಕ್ಕೆ ತಿಳಿಸುವುದು ಸೂಕ್ತವಾದ ಮಾರ್ಗ. ಅದನ್ನು ಅನುಸರಿಸಬೇಕು ಎಂದು ಸಲಹೆ ಮಾಡುತ್ತೇನೆ.

Sri H. SIDDAVEERAPPA.—With due deference to the suggestion that the Chair made that any hon'ble member can move a substantive motion, I may submit that it may not be correct or expendient under the circumstances of the case. I am sure there cannot be any differing opinions on both sides on this subject. This is a human issue with which all of us are concerned. Therefore, the Leader of the House, taking into consideration the discussion and all the deliberations that took place in this House and the opinion of the House, if he is satisfied that it is going to strengthen his hands, may himself consider moving it and it would be very proper if he does it himself instead of leaving it to some Hon'ble member which the Treasury Benches may or may not like. I therefore request the Leader of the House to place a substantive motion before the House.

Sri VEERENDRA PATIL.—Sir, if it is the desire of the House that instead of any member moving the substantive motion individually, it is better that a motion is moved on behalf of the Government, I agree to the suggestion and I am getting a draft motion and at the end of my reply to the debate, I think, I will be in a position to move this substantive motion.

**Sri B. P. GANGADHAR.**—Sir, I have only one submission to make before the Hon'ble Chief Minister starts his reply. Yesterday and day-before yesterday I was not given an opportunity to speak on the famine conditions existing in Tumkur District. If I had been allowed, I would have given a clear picture about the helpless situation prevailing in that area. I now request the Chief Minister to take into consideration the grave situation existing in Tumkur District which for the past four years was subjected to untold agony and misery due to failure of rains and crops. Some priority must be given to Tumkur District. Madhugiri, Pavagada, Tumkur Taluk and some other areas are rain shadow areas. Keeping this particular fact in view, I request the Chief Minister to kindly see that proper arrangements are made for famine relief works and starting gruel centres and providing work and food to the people in the affected areas.

**Sri S. S. SHETTAR.**—What has happened to the South Kanara flood affected area people? Rs. 100 has been given to each of the affected families. Proper and appropriate compensation should be given to the affected families.

**Mr. SPEAKER.**—The Hon'ble Member suggests that cases of people affected by floods in South Kanara may also be considered.

† **ಶ್ರೀ ವೀರೇಂದ್ರ ಪಾಟೀಲ್.**—ಅಧ್ಯಕ್ಷರೇ, ಕಳೆದ ನಾಲ್ಕೈದು ದಿವಸಗಳಿಂದ ನಮ್ಮ ರಾಜ್ಯದಲ್ಲಿ ಈ ವರ್ಷ ಹೆಚ್ಚಾಗಿ ತಲೆದೋರಿರುವಂಥ ಅಭಾವ ಪರಿಸ್ಥಿತಿಯ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ ಮತ್ತು ಈ ಚರ್ಚೆಯಲ್ಲಿ ಭಾಗವಹಿಸಿದಂಥ ಅನೇಕ ಮಾನ್ಯ ಸದಸ್ಯರು ಒಳ್ಳೆಯ ಮತ್ತು ಸೂಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಈ ಮಾನ್ಯ ಸಭೆಗೆ ಗೊತ್ತಿದೆ, ಅಭಾವ ಪರಿಸ್ಥಿತಿ ಅನಾವೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ತಲೆದೋರುತ್ತಿರುವುದು ಇದು ಮೊದಲನೇ ಸಲವಲ್ಲ. ಬಹುಶಃ ಕೆಲವು ಜಿಲ್ಲೆಗಳು ಇದಕ್ಕಾಗಿ ಹೆಸರುವಾಸಿಯಾಗಿವೆ ಎಂದು ನನಗನ್ನಿಸುತ್ತದೆ. ಪ್ರತಿ ವರ್ಷ ನಮ್ಮ ರಾಜ್ಯದಲ್ಲಿ ಒಂದಲ್ಲ ಒಂದು ಕಡೆ ಈ ಪರಿಸ್ಥಿತಿಯುಂಟಾಗುತ್ತಿದೆ ಮತ್ತು ಪ್ರತಿ ವರ್ಷ ಅಭಾವ ಪೀಡಿತ ಜನರಿಗೆ ಉದ್ಯೋಗವನ್ನು ಒದಗಿಸುವುದರ ಸಲುವಾಗಿ ಪರಿಹಾರ ಕಾಮಗಾರಿಗಳ ಸಲುವಾಗಿ ಸರ್ಕಾರ ಅನೇಕ ವರ್ಷಗಳಿಂದ ಕೋಟ್ಯಾವಧಿ ರೂಪಾಯಿ ಖರ್ಚು ಮಾಡುತ್ತಿದೆ. ಇದನ್ನು ಬಹುಶಃ ಮನಗಂಡೇ ಅನೇಕ ಮಾನ್ಯ ಸದಸ್ಯರು ಈ ರೀತಿ ತಾತ್ಪೂರ್ತಿಕವಾದ ಪರಿಹಾರವನ್ನು ಇದಕ್ಕೆ ಕಂಡು ಹಿಡಿಯಲಾರದೆ ಇದಕ್ಕೆ ಸ್ಥಾಯಿಕವಾದ ಪರಿಹಾರವನ್ನು ಕಂಡು ಹಿಡಿಯುವುದಕ್ಕೆ ಪ್ರಾರಂಭ ಮಾಡಬೇಕೆಂದು ಸಲಹೆಯನ್ನು ಮಾಡಿದ್ದಾರೆ, ಪರ್ಮನೆಂಟ್ ರಿಲೀಫ್ ಮೆಷರ್ಸ್ ಏನೇನು ಮಾಡಬೇಕು ಎನ್ನುವಂಥದ್ದನ್ನು ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದ್ದರೆ ಈ ಮಾನ್ಯ ಸದಸ್ಯರು ಈ ವಿಷಯದ ಮೇಲೆ ತಮ್ಮ ಅಭಿಪ್ರಾಯ ಏನೇನು ವ್ಯಕ್ತ ಮಾಡಿದ್ದಾರೆ ಮತ್ತು ಭಾಷಣ ಮಾಡುವ ಮುಂದೆ ಏನೇನು ಸೂಕ್ತವಾದ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ ಆ ಎಲ್ಲ ಸಲಹೆಗಳನ್ನೂ ನಾವು ದೀರ್ಘವಾಗಿ ಗಂಭೀರವಾಗಿ ಪರಿಶೀಲನೆ ಮಾಡಿಸಿ ಮುಂದೆ ಇದರ ಬಗ್ಗೆ ಯೋಗ್ಯವಾದ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ವಿರೋಧಪಕ್ಷದ ನಾಯಕರು ಈ ಕೆಲಸದ ಸಲುವಾಗಿ ಫಾಮಿನ್ ಕಮಿಷನ್ ನೇಮಕ ಮಾಡಬೇಕು ಮತ್ತು ಇವೊತ್ತು ತಲೆದೋರಿರುವಂಥ ಈ ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗಿದ್ದರೆ ಪ್ರತಿ ದಿವಸ 50 ಲಕ್ಷ ರೂಪಾಯಿಯವರೆಗೂ ಖರ್ಚು ಮಾಡಬೇಕಾಗುತ್ತದೆ ಮತ್ತು ಆ ರೀತಿಯಾಗಿ 60 ಕೋಟಿ ರೂಪಾಯಿ ಬೇಕಾಗಬಹುದು ಎನ್ನುವಂಥ ವಿಚಾರವನ್ನು ಅವರು ವ್ಯಕ್ತ ಮಾಡಿದ್ದಾರೆ. ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ದುರ್ದೈವದಿಂದ ಈ ಸಲದ ಪರಿಸ್ಥಿತಿ ಕೇವಲ ಕೆಲವು ಜಿಲ್ಲೆಗಳಿಗೆ ಸೀಮಿತವಾಗಿರಲಾರದೆ ಪರಿಸ್ಥಿತಿ ಹದಗೆಟ್ಟಿರುವುದನ್ನು ಅನೇಕ ಭಾಗಗಳಲ್ಲಿ ನಾವು ನೋಡುತ್ತಿದ್ದೇವೆ ಎನ್ನುವಂಥ ಮಾತನ್ನು ಒಪ್ಪಿಕೊಂಡಿದ್ದೇವೆ. ಬಹುಶಃ ನಾಲೆ ಕೆಳಗೆ ಇರುವ ಪ್ರದೇಶದಲ್ಲಿ, ದೊಡ್ಡ ದೊಡ್ಡ ಕೆರೆಕಟ್ಟೆಗಳು, ಜಲಾಶಯಗಳು ಇರುವ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಿಗೆ ಕಾಣುತ್ತಿರ

ಬಹುದು. ಆದರೆ ಉಳಿದ ಎಲ್ಲ ಕಡೆಯೂ ಹೆಚ್ಚು ಕಡಮೆ ಪರಿಸ್ಥಿತಿ ಹೀಗೆಯೇ ಇದೆ ಎನ್ನುವಂಥ ಮಾತನ್ನು ನಾನು ಒಪ್ಪಿಕೊಂಡಿದ್ದೇನೆ. ಅದಕ್ಕಾಗಿ ಇವೊತ್ತು ಪ್ರತಿಯೊಬ್ಬ ಸದಸ್ಯರೂ ತಮ್ಮ ತಮ್ಮ ಮತ ಕ್ಷೇತ್ರದಲ್ಲಿ ಪರಿಸ್ಥಿತಿ ಹದಗೆಟ್ಟಿದೆ, ಮತ್ತೊಂದು ಮತ ಕ್ಷೇತ್ರಕ್ಕಿಂತ ತಮ್ಮ ಮತಕ್ಷೇತ್ರದಲ್ಲಿ ಪರಿಸ್ಥಿತಿ ಹದಗೆಟ್ಟಿದೆ ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಆ ಲೆಕ್ಕದಿಂದ ಈಗಿನ ಪರಿಸ್ಥಿತಿಯನ್ನು ನಿವಾರಣೆ ಮಾಡುವುದರ ಸಲುವಾಗಿ ತಕ್ಷಣ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಲಾಂಗ್ ರೇಂಜ್ ಪ್ರೋಗ್ರಾಂ ಏನೇನು ತೆಗೆದುಕೊಳ್ಳಬೇಕು ಎನ್ನುವುದನ್ನು ಮುಖ್ಯವಾಗಿ ನಾವು ಪರಿಶೀಲಿಸಬೇಕಾಗಿದೆ. ಅದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ನೀಡಿದ್ದಾರೆ.

ಈ ವಿಷಯದ ಮೇಲೆ ಚರ್ಚೆ ಮಾಡುತ್ತಾ ಇರುವುದು ದುರ್ದೈವದ ಸಂಗತಿ. ಕೆಲವು ಮಾನ್ಯ ಸದಸ್ಯರು ಇದೇ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ಸರ್ಕಾರವನ್ನು ಟೀಕಿಸುವ ಪ್ರಯತ್ನ ಮಾಡಿದ್ದಾರೆ. ಮಂತ್ರಿ ಮಂಡಲದ ಮೇಲೆ ದೋಷಾರೋಪಣೆ ಮಾಡಿದ್ದಾರೆ. ಇದನ್ನು ಏತಕ್ಕೆ ಮಾಡುತ್ತಾರೋ ಗೊತ್ತಿಲ್ಲ. ಯಾರ ಮೇಲಾದರೂ ದೋಷಾರೋಪಣೆ ಮಾಡಿದರೆ ದೋಷ ಪರಿಹಾರವಾಗುವುದಿಲ್ಲ. ಈವೊತ್ತು ಈ ಒಂದು ಅಭಾವ ಪರಿಸ್ಥಿತಿಗೆ ಸರಕಾರವಾಗಲಿ ಮಂತ್ರಿ ಮಂಡಲವಾಗಲಿ, ಅಧಿಕಾರಿಗಳಾಗಲಿ ಜವಾಬ್ದಾರರಲ್ಲ. ನಮ್ಮ ರಾಜ್ಯವು ನಿಸರ್ಗದ ಪ್ರಕೋಪಕ್ಕೆ ತುತ್ತಾಗಿ ದೇವರು ಮುನಿದಾಗ ನಾವು ಯಾರ ಮೇಲೆ ಏನು ಹೇಳಬೇಕೆಂದು ಮಾನ್ಯ ಸದಸ್ಯರು ವಿಚಾರ ಮಾಡಬೇಕಾಗಿದೆ. ಮತ್ತು ಜನರಿಗೆ ಯಾವ ರೀತಿ ರಿಲೀಫ್ ಕೊಡಬೇಕು, ಕಷ್ಟದಲ್ಲಿರತಕ್ಕ ಜನರಿಗೆ ಯಾವ ರೀತಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವುವನ್ನು ರಚನಾತ್ಮಕ ದೃಷ್ಟಿ ಯಿಂದ ವಿಚಾರ ಮಾಡಬೇಕಾಗಿದೆ. ಮಾನ್ಯ ಸದಸ್ಯರು ರಚನಾತ್ಮಕವಾದ ಸಲಹೆಗಳನ್ನು ಕೊಡು ವುದರ ಜೊತೆಗೆ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಹಾಕುತ್ತಾರೋ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಮಾನ್ಯ ಸದಸ್ಯರೆಲ್ಲರೂ ಕೂಡ ಸಹಕಾರ ನೀಡಬೇಕಾಗಿದೆ. ಕಳಕಳಿ ಯಿಂದ ಹೇಳಬೇಕಾದರೆ ಆಹಾರ ಪ್ರಶ್ನೆಯಲ್ಲಾಗಲಿ ಅಭಾವ ಪೀಡಿತ ಪ್ರದೇಶದಲ್ಲಿ ಜನರ ಕಷ್ಟ ವನ್ನು ನಿವಾರಣೆ ಮಾಡುವುದರಲ್ಲಾಗಲಿ, ರಾಜಕೀಯ ಬರಕೂಡದು, ಇದರ ಬಗ್ಗೆ ಪರಿಹಾರ ವನ್ನು ಕಂಡು ಹಿಡಿಯಬೇಕೇ ವಿನಃ ಇದರಲ್ಲಿ ರಾಜಕೀಯ ಸಲ್ಲದು. These problems should be above politics. ನಮಗೆ ಇವೊತ್ತು ಇರುವ ಪರಿಸ್ಥಿತಿಯಲ್ಲಿ ರಾಜಕೀಯದಿಂದ ನಾವು ಯಾವ ಪರಿಹಾರವನ್ನೂ ಮಾಡುವುದಕಾಗುವುದಿಲ್ಲ. ಆ ತರಹ ಮಾಡುವುದಕ್ಕೆ ಏನಾದರೂ ಪ್ರಯತ್ನಪಟ್ಟರೆ ಜನರಿಗೆ ಸಾಕಷ್ಟು ಸಹಾಯವಾಗುವುದಿಲ್ಲ. ಕೆಲವು ಸದಸ್ಯರು ಹಿಂದೆ ಹೇಳಿದುದನ್ನೇ ಹೇಳಿದ್ದಾರೆ. ಅವರು ಹೇಳಿರುವ ಪೈಕಿ ಕುಡಿಯುವ ನೀರಿನ ಕಷ್ಟ ಇರುವುದು, ಬಾವಿಯಲ್ಲಿ ನೀರು ಇಲ್ಲದೆ ಇರುವುದು, ಭಾವಿಯನ್ನು ಆಳಮಾಡುವುದು, ದನಗಳಿಗೆ ಹುಲ್ಲು ಕೊಡುವುದು, ರೈತರಿಗೆ ಹೆಚ್ಚು ಐ.ಪಿ. ಸೆಟ್ಸ್ ಒದಗಿಸುವುದು, ವಿದ್ಯುಚ್ಛಕ್ತಿ ಒದಗಿಸುವುದು, ಕೆಲವು ಕಡೆ ಆಹಾರ ಧಾನ್ಯ ವನ್ನು ತರಿಸಿ ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದು ಇನ್ನೂ ಮುಂತಾದ ಸೂಕ್ತವಾದ ಸಲಹೆ ಗಳನ್ನು ಸದಸ್ಯರು ಹೇಳಿದ್ದಾರೆ. ಇವೊತ್ತಿನ ದಿವಸ ನಾವು ಏನೇನು ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದೇವೆ ಅದನ್ನೂ ಕೂಡ ಒಂದೊಂದಾಗಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಹೋದಸಲ ಬಡ್ಜೆಟ್ಟಿನಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಸಾಕಷ್ಟು ದುಡ್ಡು ಕೊಟ್ಟಿಲ್ಲ. ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಮತ್ತು ಸರ್ವೀಸಿಂಗ್ ಆಫ್ ಐ. ಪಿ. ಸೆಟ್ಸ್ ಇವುಗಳಿಗೆ, 1967–68ನೇ ಸಾಲಿನಲ್ಲಿ 500 ಗ್ರಾಮಗಳಿಗೆ ಮತ್ತು 15,100 ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ನಿರ್ಧರಿಸಿದ್ದೆವು. ಮತ್ತು 1968–69ನೇ ಸಾಲಿಗೆ ಇನ್ನೂ 200—300 ಹಳ್ಳಿಗಳಿಗೆ, ಮತ್ತು 8,000 ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಒಂದು ಟಾರ್ಗೆಟ್ ಇಟ್ಟುಕೊಂಡಿದ್ದೇವೆ. ಆ ಕಾರ್ಯಕ್ರಮ ತೆಗೆದುಕೊಳ್ಳಬೇಕಾದರೆ ಸ್ವಲ್ಪ ಮಟ್ಟಿಗೆ ಜನರ ಸಹಾಯವೂ ಬೇಕು. ಅದಕೋಸ್ಕರ ವಾಲಂಟರಿ ಕಾಂಟ್ರಿಬ್ಯೂಷನ್ ಸ್ಕೀಮನ್ನು ಹಾಕಿಕೊಂಡಿದ್ದೆವು. ಆದರೆ ಈ ವಾಲಂಟರಿ ಸ್ಕೀಮ್ ಬಗ್ಗೆ ಟೀಕೆ ಬಂದಿದ್ದರಿಂದ ಇದನ್ನು ತೆಗೆದುಬಿಡಬೇಕೆಂಬ ಅಭಿಪ್ರಾಯ ಬಂತು. ಆದುದರಿಂದ ಇದರ ಬಗ್ಗೆ ಏನು ಒಂದು ಉತ್ಸಾಹ ಇತ್ತು ಎಷ್ಟು ಮಾಡಬಹುದಾಗಿತ್ತೋ ಅಷ್ಟು ಆಗಿಲ್ಲ. ಈಗ ನಾವು ಏನು ಮಾಡಿ ಕೊಂಡಿದ್ದೇವೆ ಎಂದರೆ ಈ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಮತ್ತು ಸರ್ವಿಸಿಂಗ್ ಆಫ್ ಐ. ಪಿ. ಸೆಟ್ಸನ್ನು 1968–69ರಲ್ಲಿ ಕಡಿಮೆ ಮಾಡಬಾರದು ಎಂದು ಇದ್ದೇವೆ. ಆದರೆ ನಾನು ಅಧಿಕಾರ ವಹಿಸಿಕೊಂಡಮೇಲೆ ಈ ವಾಲಂಟರಿ ಸ್ಕೀಂ ವಿತ್‌ಡ್ರಾ ಮಾಡಿದ್ದೇವೆ. ಈಗ ವಾಲಂಟರಿ ಸ್ಕೀಂ ಇಲ್ಲ. ಅದೇ ರೀತಿಯಾಗಿ ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕು, ನಮ್ಮ ರೈತರಿಗೆ ಸುಖ ಸಿಕ್ಕಬೇಕು, ಅವರಿಗೆ ಸಕಾಲದಲ್ಲಿ ಅನುಕೂಲತೆ ಕೊಡಬೇಕು ಎಂದು ಹೋದ ವರ್ಷ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವೋ, ಅದರ ಟಾರ್ಗೆಟ್ ಜಾಸ್ತಿ ಮಾಡಿದ್ದೇವೆ.

(ಶ್ರೀ ವೀರೇಂದ್ರ ಪಾಟೀಲ್)

ಅದರಂತೆ 1968–69ರಲ್ಲಿ 8 ಸಾವಿರ ಬಾವಿಗಳಿಗೆ ವಿದ್ಯುಚ್ಛಕ್ತಿ ಕೊಡಲು ಏನು ಒಂದು ಟಾರ್ಗೆಟ್ ಇತ್ತೋ ಅದನ್ನು 20 ಸಾವಿರಕ್ಕೆ ಏರಿಸಲು ನಿರ್ಧರಿಸಿದ್ದೇವೆ. ಮತ್ತು 200–250 ಹಳ್ಳಿಗಳಿಗೆ ಕೊಡಬೇಕೆಂದು ಏನು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೆವೋ ಅದನ್ನು 500 ಹಳ್ಳಿಗಳಿಗೆ ಏರಿಸಬೇಕೆಂದು ನಿರ್ಧರಿಸಿದ್ದೇವೆ. ಅದಕ್ಕೆ ಬೇಕಾಗತಕ್ಕಂಥ ಹಣವನ್ನು ಷೆಡ್ಯೂಲ್ ಬ್ಯಾಂಕುಗಳಿಂದ ಪಡೆಯಲು ಉದ್ದೇಶಿಸಿದ್ದೇವೆ. ಆ ರೀತಿ ಬ್ಯಾಂಕುಗಳಿಂದ ದುಡ್ಡು ಬಾರದೆ ಇದ್ದರೆ ಸರ್ಕಾರದವರೇ ಕೊಡುತ್ತಾರೆ ಎಂದು ನಾನು ಹೇಳಿದ್ದೇನೆ. ಈ ರೀತಿ ಅವರ ಕಷ್ಟವನ್ನು ಪರಿಹಾರ ಮಾಡುವುದಕ್ಕಾಗಿ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಹೆಚ್ಚು ಹೆಚ್ಚು ಐ. ಪಿ. ಸೆಟ್ಟುಗಳನ್ನು ಶೀಘ್ರಗತಿಯಲ್ಲಿ ಸರಬರಾಜು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿ ಹೆಚ್ಚು ಹೆಚ್ಚು ಐ. ಪಿ. ಸೆಟ್ಟುಗಳನ್ನು ಒದಗಿಸಿದರೆ ಈ ಅಭಾವ ಸ್ವಲ್ಪಮಟ್ಟಿಗೆ ನಿವಾರಣೆ ಆಗಬಹುದು. ಅದಕ್ಕಾಗಿ ಈ ಒಂದು ಕಾರ್ಯಕ್ರಮ ಹಾಕಿಕೊಂಡರೆ ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಎಷ್ಟು ಬಾವಿಗಳಿಗೆ ಕೊಡಬೇಕೆಂದು ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—20,000 ಬಾವಿಗಳಿಗೆ ಮತ್ತು 500 ಹಳ್ಳಿಗಳಿಗೆ ಈ ಒಂದು ಕಾರ್ಯಕ್ರಮವನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಹಾಕಿಕೊಂಡಿದ್ದಾರೆ. ಈ ಒಂದು ಕಾರ್ಯಕ್ರಮ ಹಾಕಿಕೊಂಡರೆ ಜನರ ಕಷ್ಟವನ್ನು ಸ್ವಲ್ಪಮಟ್ಟಿಗೆ ಪೂರೈಸಬಹುದು ಈ ಪ್ರೋಗ್ರಾಂನ್ನು ಜಾಸ್ತಿ ಮಾಡಬೇಕು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ವಿಷಯದಲ್ಲಿ ಹೇಳಬೇಕಾದರೆ ಬೋರ್ಡ್‌ನವರಿಗೆ ಇದನ್ನು ಲಾಭಕರವಾಗಿ ಮಾಡುವುದಕ್ಕಾಗುವುದಿಲ್ಲ. ಅವರು ಇದರಿಂದ ನಷ್ಟವಾಗುತ್ತದೆ ಆ ನಷ್ಟವನ್ನು ತುಂಬಿಕೊಡಬೇಕು ಎಂದು ಹೇಳುತ್ತಾರೆ. ಆದುದರಿಂದ ಇದನ್ನು ಪರಿಶೀಲಿಸಬೇಕಾಗಿದೆ. ಈ ಕೆಲಸ ಎಲ್ಲಾ ಕಡೆಯೂ ಚೆನ್ನಾಗಿ ನಡೆಯುತ್ತಾ ಇದೆ. ಆದರೆ ಸದಸ್ಯರು ತಮ್ಮ ಭಾಷಣದಲ್ಲಿ ಸಾಕಷ್ಟು ವೇಗದಿಂದ ನಡೆಯುತ್ತಾ ಇಲ್ಲ ಎಂದು ಹೇಳಿದರು. ಕೆಲವು ಕಡೆ ಮಂದಗತಿಯಲ್ಲಿ ನಡೆಯುತ್ತಾ ಇದೆ, ಕೆಲವು ಕಡೆ ಲೋಪದೋಷ ಇವೆ ಎಂದು ನನ್ನ ಗಮನಕ್ಕೆ ಬರುತ್ತಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ವಿಚಾರ ಇದೆ.

ಇನ್ನೊಂದು ಮಾತು ಏನೆಂದರೆ ಇವೊತ್ತಿನ ದಿವಸ ಕೇಂದ್ರ ಸರ್ಕಾರವನ್ನು ದೋಷಾರೋಪಣೆ ಮಾಡುವುದು ಸರಿಯಲ್ಲ. ಕೇಂದ್ರ ಸರ್ಕಾರದವರಿಗೆ ನಾವು ನಿಜವಾಗಿಯೂ ಆಭಾರಿಯಾಗಬೇಕಾಗಿದೆ. ಕೇಂದ್ರ ಸರ್ಕಾರದವರು ಈ ಪರಿಸ್ಥಿತಿಯನ್ನು ಮೊದಲೇ ಅರಿತು ನಮಗೆ ಎಷ್ಟರಮಟ್ಟಿಗೆ ಸಹಾಯ ಮಾಡುವುದಕ್ಕೆ ಅವಕಾಶ ಇದೆಯೋ ಅದಕ್ಕೆ ಒಂದು ಸೆಂಟ್ರಲ್ ಟೀಮನ್ನು ಕಳುಹಿಸಿ ನಮ್ಮ ಪರಿಸ್ಥಿತಿಯನ್ನೂ ಅರಿತುಕೊಂಡು ಅದರ ಪ್ರಕಾರ $8\frac{1}{2}$ ಕೋಟಿ ರೂಪಾಯಿ ಬೇಕು ಎಂದು ಕೇಳಿದ್ದರಲ್ಲಿ ಮೊದಲು $2\frac{1}{2}$ ಕೋಟಿ ರೂಪಾಯಿಯನ್ನು ಕೊಟ್ಟರು. ಅದರಲ್ಲಿ ಮೊದಲು ಒಂದು ಕೋಟಿ ರೂಪಾಯಿ ಅನಂತರ 50 ಲಕ್ಷ ರೂಪಾಯಿ ಇತ್ತೀಚೆಗೆ ಒಂದು ಕೋಟಿ ರೂಪಾಯಿ ಈ ರೀತಿ ಈಗಾಗಲೆ $2\frac{1}{2}$ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇಷ್ಟಲ್ಲದೆ ಪರಿಹಾರ ಕಾಮಗಾರಿಗಳಿಗಾಗಿ ಮಾಡುವ ವೆಚ್ಚಕ್ಕೆ ಲೆಕ್ಕಪತ್ರಗಳನ್ನು ಒಪ್ಪಿಸಿದ ಮೇಲೆ ಇನ್ನೂ ಹೆಚ್ಚಿಗೆ ಬೇಕಾಗಿದ್ದರೆ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ ಎಂದು ಉಪಪ್ರಧಾನ ಮಂತ್ರಿಯವರೂ ಕೂಡ ಹೇಳಿದ್ದಾರೆ. ಈ ರೀತಿ ಎರಡೂವರೆ ಕೋಟಿ ರೂಪಾಯಿಯನ್ನು ಈಗಾಗಲೇ ರೈತರ ಕಷ್ಟ ಪರಿಹಾರವಾಗಬೇಕು, ಅವರಿಗೆ ಕೈತುಂಬ ಕೆಲಸ ಸಿಗಬೇಕು ಎಂದು ಡಿವಿಜನಲ್ ಕಮಿಷನರ ಮುಖಾಂತರ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಂಚಿಸಲು ಏರ್ಪಾಡನ್ನು ಮಾಡಿದೆ. ಆದರೆ ಹಣ ಹಂಚಿದ ಪ್ರಕಾರ ಯಾವ ರೀತಿ ಕೆಲಸ ನಡೆಯಬೇಕಾಗಿತ್ತೋ ಹಾಗೆ ಕೆಲಸವೂ ನಡೆಯಲಿಲ್ಲ – ಅಷ್ಟು ಹಣವೂ ಖರ್ಚಾಗಿಲ್ಲ. ಇವತ್ತಿನ ದಿವಸ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಏನು ಎರಡೂವರೆ ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆಯೋ, ಅದು ಇನ್ನೂ ಖರ್ಚಾಗಿಲ್ಲ. ಅದಲ್ಲದೆ, ಅದರ ಲೆಕ್ಕಪತ್ರಗಳು ಇನ್ನೂ ನಮ್ಮಲ್ಲಿಗೆ ಬಂದಿಲ್ಲ. ಕೇಂದ್ರ ಸರ್ಕಾರಕ್ಕೆ ಈ ಲೆಕ್ಕಪತ್ರಗಳನ್ನು ಸಲ್ಲಿಸದಿದ್ದರೆ, ಇನ್ನೂ ಹೆಚ್ಚಿನ ಹಣ ಕೇಳುವ ಹಾಗಿಲ್ಲ. ಬಹಳ ಒಳ್ಳೆಯ ರೀತಿಯಿಂದ ಕೆಲಸ ಕಾರ್ಯಗಳು ನಡೆಯಬೇಕೆಂಬುದು ನನ್ನ ಸಂಕಲ್ಪ. ಇವತ್ತಿನ ಪರಿಸ್ಥಿತಿಯಲ್ಲಿ ಏನು ಒದಗಿದೆ ಅಂದರೆ, ನಾವು ಇಲ್ಲಿ ಚರ್ಚೆ ಪ್ರಾರಂಭ ಮಾಡಿದ ಮೇಲೆ ಅಲ್ಲಲ್ಲಿ ಸ್ವಲ್ಪ ಮಳೆ ಬಂದಿದೆ; ಸರ್ವಸಾಧಾರಣವಾಗಿ ಈಗ ಅನೇಕ ಜಿಲ್ಲೆಗಳಲ್ಲಿ ಆಗಾಗ್ಗೆ ಮಳೆ ಬರುತ್ತಿದೆ. ಉತ್ತರ ಕರ್ಣಾಟಕದಲ್ಲಿ ಈಗ ಮಳೆ ಬಂದರೆ ಬಹಳ ಒಳ್ಳೆಯದು. ಬಿತ್ತನೆಗೆ ಮಳೆ ಬಂದರೆ ಮುಂದೆ ತಂಪು ಗಾಳಿಯಿಂದ ಕೂಡ ಕೆಲವು ಬೆಳೆ ಆಗುತ್ತವೆ. ಇದು ಏನೇ ಇರಲಿ ಇವತ್ತಿನ ದಿವಸ ನಾವು ಒಂದು ಹದಗೆಟ್ಟ ಪರಿಸ್ಥಿತಿಯನ್ನು ಎದುರಿಸಬೇಕಾಗಿರುತ್ತದೆ. ನಾನು ಮೊದಲೇ ಒಪ್ಪಿಕೊಂಡಿದ್ದೇನೆ,

ಏನೆಂದರೆ, ನಮ್ಮಲ್ಲಿ ಆಗಬೇಕಾಗಿರತಕ್ಕ ಇನ್ನೂ ಅನೇಕ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಸದ್ಯಕ್ಕೆ ನಿಲ್ಲಿಸಿದರೂ ಚಿಂತೆ ಇಲ್ಲ, ಅವುಗಳಿಗೆ ಬದಲಾಗಿ ಇವತ್ತು ನಮ್ಮ ರೈತರಿಗೆ ಸಾಕಷ್ಟು ಪರಿಹಾರ ಕಾಮಗಾರಿಗಳನ್ನು ಒದಗಿಸಿಕೊಡಬೇಕಾಗಿದೆ; ಅವರ ಗೋಳನ್ನು ನೋಡುವುದಕ್ಕಾಗುವುದಿಲ್ಲ ಅವರನ್ನು ಈ ಕಾಲದಲ್ಲಿ ಕಷ್ಟಕ್ಕೆ ಈಡು ಮಾಡಬಾರದು; ಎಂಬುದಾಗಿ ಈ ರೀತಿ ನಾವು ಯಾವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಎಂಬುದನ್ನು ಈ ಕಾರ್ಯವನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಬೇಕಾದರೆ, ನಮ್ಮ ಜಿಲ್ಲಾಧಿಕಾರಿಗಳೂ, ಡಿವಿಜನಲ್ ಕಮಿಷನರುಗಳೂ, ಮತ್ತು ಅವರ ಕೈಕೆಳಗೆ ಇರುವಂತಹ ಅಸಿಸ್ಟೆಂಟ್ ಕಮಿಷನರುಗಳೂ, ತಹಸೀಲ್ದಾರರುಗಳೂ ಬಹಳ ಒಳ್ಳೆಯ ರೀತಿಯಿಂದ ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ಸರ್ಕಾರದವರು ಈಗ ಕಂದಾಯವನ್ನು ಒಟ್ಟಿಗೆ ಕೊಡಬೇಕೆಂದು ಕೇಳುತ್ತಿದ್ದಾರೆ. ಇಂಥ ಕ್ಷಾಮದ ಪರಿಸ್ಥಿತಿಯಲ್ಲಿ ಒಂದೇ ಕಂತಿನಲ್ಲಿ ಕಂದಾಯ ಕೊಡಲು ರೈತನಿಗೆ ಬಹಳ ತೊಂದರೆಯಾಗಿದೆ .......

(ಆ ವೇಳೆಯಲ್ಲಿ ಇನ್ನಿತರ ಕೆಲವು ಸದಸ್ಯರು ಮಧ್ಯೆ ಮಾತನಾಡಿ ಸ್ವಲ್ಪ ಗಲಾಟೆ ಆಯಿತು.)

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಅದು ಮುಗಿದ ನಂತರ ಪ್ರಶ್ನೆ ಕೇಳಬಹುದು.

ಶ್ರೀ ವೀರೇಂದ್ರ ಪಾಟೀಲ್.—ನನ್ನ ಒಂದು ವಿನಂತಿ ಏನೆಂದರೆ, ನಾನು ಹೇಳುವುದನ್ನೆಲ್ಲ ಹೇಳಿದ ಮೇಲೆ, ಬಹುಶಃ ಯಾವುದಾದರೂ ಪಾಯಿಂಟ್ಸ್ ಕವರ್ ಮಾಡದಿದ್ದರೆ, ಅದಕ್ಕೆ ಆಮೇಲೆ ಪ್ರಶ್ನೆ ಹಾಕಿದರೆ, ನಾನು ಉತ್ತರ ಕೊಡುತ್ತೇನೆ. ಮಧ್ಯದಲ್ಲಿ ಏನಾದರೂ ಕೇಳಿದರೆ ಯಾವ ವಿಚಾರವನ್ನು ನಾನು ಸಭೆಯ ಮುಂದಿಡಬೇಕೋ, ಅದಕ್ಕೆ ತೊಡಕು ಉಂಟಾಗುತ್ತದೆಂದು ನನಗನಿಸುತ್ತದೆ. ಇನ್ನೂ ಬೇಕಾದರೆ ಒಂದು ಗಂಟೆ, ಎರಡು ಗಂಟೆ ಹೇಳುವುದಕ್ಕೆ ನಾನು ತಯಾರಾಗಿದ್ದೇನೆ. ಆದ್ದರಿಂದ ನನ್ನ ಉತ್ತರ ಮುಗಿದಮೇಲೆ, ತಾವು ಕೇಳಿ; ತಮ್ಮ ಪ್ರಶ್ನೆಗಳಿಗೆ ಉತ್ತರ ಹೇಳುತ್ತೇನೆ.

ಆದರೆ ಕೆಲವು ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ನನಗೆ ಗೊತ್ತಿದೆ. ಎಲ್ಲಿಯವರೆಗೆ ಹೀಗೆ ನಮ್ಮ ಸಿಬ್ಬಂದಿ ವರ್ಗ ಚೆನ್ನಾಗಿ ಕೆಲಸ ಮಾಡುವುದಿಲ್ಲವೋ, ಅಲ್ಲಿಯವರೆಗೆ ನಾವು ಎಷ್ಟು ದುಡ್ಡು ಕೊಟ್ಟರೂ ಅದು ಸದ್ವಿನಿಯೋಗವಾಗುವುದಿಲ್ಲ. ಸಕಾಲದಲ್ಲಿ ಯಾವ ಉದ್ದೇಶದಿಂದ ದುಡ್ಡು ಕೊಡುತ್ತೇವೋ, ಆ ಉದ್ದೇಶವನ್ನು ಸಾಧಿಸುವ ನಿರ್ಣಯಕ್ಕೆ ಬಂದಿದ್ದೇವೆ. ಈ ದಿವಸ ನಮ್ಮ ತಹಸೀಲ್ದಾರರಾಗಲಿ, ಅಸಿಸ್ಟೆಂಟ್ ಕಮಿಷನರಾಗಲಿ, ಜಿಲ್ಲಾಧಿಕಾರಿಗಳಾಗಲಿ, ಅಥವಾ ಡಿವಿಜನಲ್ ಕಮಿಷನರಾಗಲಿ, ಈ ಒಂದು ಪರಿಸ್ಥಿತಿಯನ್ನು ಎದುರಿಸುವುದಕ್ಕೆ, ತಮ್ಮ ಉಳಿದ ಎಲ್ಲಾ ಕೆಲಸ ಕಾರ್ಯಗಳನ್ನು ಬದಿಗೊತ್ತಿ, ಇದೇ ಕೆಲಸಕ್ಕೆ ತಮ್ಮ ಎಲ್ಲ ಕಾಲವನ್ನೂ ಸಂಪೂರ್ಣವಾಗಿ ಮೀಸಲಾಗಿಡಬೇಕು. ಬಹುಶಃ ಆ ರೀತಿ ನಡೆಯಬೇಕಾದರೆ, ಇದಕ್ಕೆ ನಮ್ಮ ಮೆಶಿನರಿ ಹೊಂದಾಣಿಕೆಯಾಗಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯಬೇಕಾದರೆ ಕೆಲವು ಕಡೆ ಅಧಿಕಾರಿಗಳ ಬದಲಾವಣೆ ಮಾಡಬೇಕಾದ ಅವಶ್ಯಕತೆ ಇದೆ ಎಂದು ನಾನು ಒಂದು ನಿರ್ಣಯಕ್ಕೆ ಬಂದಿದ್ದೇನೆ. ಇವತ್ತಿನ ದಿವಸ, ಈ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡುತ್ತಾರೆಯೇ ಅಥವಾ ಇಲ್ಲವೇ ಎಂಬುದು ನೋಡಲು ಒಂದು ಪರೀಕ್ಷೆಯ ಕಾಲ. ಯಾವ ರೀತಿ ಈ ಪರಿಹಾರ ಕಾಮಗಾರಿಗಳನ್ನು ಚೆನ್ನಾಗಿ ಒಂದು ಹೆಚ್ಚಿನ ಮಟ್ಟದಲ್ಲಿ ಮಾಡಿ, ಜನರ ಹತ್ತಿರ ಹೋಗಿ ಅವರ ಕಷ್ಟಸುಖಗಳಿಗೆ ಪರಿಹಾರ ಕಂಡುಹಿಡಿಯುತ್ತಾರೋ, ಅದರ ಮೇಲೆ ಅವರ ದಕ್ಷತೆಯನ್ನು ಅಳೆಯಬಹುದು ಎಂದುಕೊಂಡಿದ್ದೇನೆ. ಎಲ್ಲೆಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ಆಗುವುದಿಲ್ಲವೋ, ಅಲ್ಲಿಂದ ಅವರನ್ನು ತೆಗೆದುಹಾಕಲು ನಾವು ಹಿಂದು ಮುಂದು ನೋಡುವುದಿಲ್ಲ. ನನಗೆ ಗೊತ್ತಿದೆ, ಅನೇಕ ಜಿಲ್ಲಾಧಿಕಾರಿಗಳು ಇಂಥ ಪರೀಕ್ಷಾ ಕಾಲದಲ್ಲಿ ಹಗಲು ರಾತ್ರಿ ದುಡಿಯಬೇಕೆಂಬ ಮನಸ್ಸು ಅವರಿಗಿಲ್ಲ. ಕೆಲವರಿಗೆ ದುರ್ದೈವದಿಂದ ಆರೋಗ್ಯವೂ ಚೆನ್ನಾಗಿರುವುದಿಲ್ಲ. ಅಂಥ ಪರಿಸ್ಥಿತಿ ಇರುವಾಗ ನಾವು ಅವರನ್ನು ತೆಗೆದು ಬೇರೆ ಕಡೆಗೆ ಹಾಕಲೇಬೇಕಾಗುತ್ತದೆ. ಅವರ ಅನುಕೂಲದ ಕಡೆಗೆ ನಾವು ಈ ದಿವಸ ನೋಡುವ ಹಾಗಿಲ್ಲ. ಅಲ್ಲಿ ರೈತರಿಗೆ ಪರಿಹಾರ ಸಿಗಬೇಕು, ಕೆಲಸ ಒಳ್ಳೆಯ ರೀತಿಯಿಂದ ಆಗಬೇಕು ಮತ್ತು ಜನರಿಗೆ ಸಂಪೂರ್ಣವಾಗಿ ಸಕಾಲದಲ್ಲಿ ಎಲ್ಲಾ ಅನುಕೂಲತೆಗಳು ಬರಬೇಕು ಎನ್ನುವ ದೃಷ್ಟಿಯಿಂದ ನಾವು ಕೆಲವು ಬದಲಾವಣೆ ಮಾಡಬೇಕಾದಂತಹ ಅವಶ್ಯಕತೆ ಬರಬಹುದು. ನಾನು ಎಲ್ಲರನ್ನೂ ಒಂದು ಕಳಕಳಿಯಿಂದ ವಿನಂತಿ ಮಾಡಿಕೊಂಡು ಕೇಳಿಕೊಳ್ಳುವುದೇನೆಂದರೆ, ಈ ವಿಚಾರದಲ್ಲಿ ಹೊರಗಿನವರು ಯಾರೂ ಹಸ್ತಕ್ಷೇಪ ಮಾಡದಿದ್ದ ಪಕ್ಷದಲ್ಲಿ ನಮ್ಮ ಪರಿಸ್ಥಿತಿ ಬಹಳಮಟ್ಟಿಗೆ ಸುಧಾರಿಸಬಹುದು ಮತ್ತು ಜನರಿಗೆ ಪರಿಹಾರ ಕೊಡಬಹುದು ಎಂಬ ನಂಬಿಕೆ ನನಗೆ ಇದೆ. ಮತ್ತು ಇಲ್ಲಿಗೆ ಪ್ರತಿ ಜಿಲ್ಲೆಗಳಿಂದ ಸಾಕಷ್ಟು ಮಾಹಿತಿಗಳು ಬರುವುದಿಲ್ಲ

(ಶ್ರೀ ವೀರೇಂದ್ರ ಪಾಟೀಲ್)

ಮತ್ತು ಲೆಕ್ಕ ಪತ್ರಗಳು ಕೂಡ ಬರುವುದಿಲ್ಲ. ಈ ಬೆಂಗಳೂರಿನಲ್ಲ ನಮ್ಮ ಸೆಕ್ರಟರಿಯೇಟಿನಲ್ಲಿ ಒಂದು ಸ್ಪೆಷಲ್ ಸೆಲ್ ಕ್ರಿಯೇಟ್ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದಕ್ಕೆ ಒಬ್ಬ ಸೀನಿಯರ್ ಡಿವಿಜನಲ್ ಕಮಿಷನರನ್ನು ಡಿಸ್ಟ್ರೆಸ್ ರಿಲೀಫ್ ಕಮಿಷನರ್ ಎಂದು ನಾಮಕರಣ ಮಾಡಿ ಅವರಿಗೆ ಸಂಪೂರ್ಣವಾದ ಜವಾಬ್ದಾರಿಯನ್ನು ಕೊಡತ್ತೇವೆ. ಮತ್ತು ಅಲ್ಲಲ್ಲಿ ಪರಿಹಾರ ಕಾಮಗಾರಿಗಳು ಯಾವ ರೀತಿಯಾಗುತ್ತಾ ಇವೆ ಎಂದು ಪ್ರತಿ ಜಿಲ್ಲೆಯಲ್ಲಿ ಕೆಲಸ ಕಾರ್ಯಗಳನ್ನು ನೋಡಿಕೊಂಡು ಬರುವುದಕ್ಕೆ ಮತ್ತು ಆಗಿಂದಾಗ್ಗೆ ಸಲಹೆಗಳನ್ನು ಕೊಡುವುದಕ್ಕೆ ಮತ್ತೊಬ್ಬ ಸೀನಿಯರ್ ಐ. ಎ. ಎಸ್. ಆಫೀಸರನ್ನು ಹಾಕಿ ಸ್ಪೆಷಲ್ ಸೆಲ್ ಕ್ರಿಯೇಟ್ ಮಾಡಿದ್ದೇವೆ. ಈ ಒಂದು ಕಾರ್ಯಕ್ರಮ ಈಗಾಗಲೆ ಮಾಡಿದ್ದೇವೆ. ಇನ್ನು ಕೆಲಸಕಾರ್ಯಗಳನ್ನು ಚುರುಕಾಗಿ ಮಾಡಿ ಕೊಂಡು ಹೋಗಬಹುದು.

ಶ್ರೀ ಎಸ್. ಶಿವಪ್ಪ.—ಫ್ಯಾಮಿನ್ ಕಮಿಷನರ್ ಎಂದು ಏಕೆ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಫ್ಯಾಮಿನ್ ಕಮಿಷನರ್ ಎಂಬುದು ಸರಿಯಲ್ಲ. ಎಲ್ಲಿಯವರೆಗೆ ಸ್ಥಿತಿಗತಿಗಳು ಇದೇ ರೀತಿಯಾಗಿ ಇರುತ್ತವೆಯೋ, ಅಲ್ಲಿಯವರೆಗೆ ಮಾತ್ರ ನಾವು ಸಹಕಾರದಿಂದ ಇರುತ್ತೇವೆ ಎನ್ನುವ ಭಾವನೆ ಜನರಿಗೆ ಕೊಡುವುದಿಲ್ಲ. ಈಗ ಇರುವುದು ಡಿಸ್ಟ್ರೆಸ್, ಫ್ಯಾಮಿನಲ್ಲ. ಅಭಾವ ಪರಿಸ್ಥಿತಿ ಉಂಟಾಗಿರುವುದರಿಂದ ಡಿಸ್ಟ್ರೆಸ್ ರಿಲೀಫ್ ಕಮಿಷನರ್ ಎಂದು ನಾವು ಒಬ್ಬ ಡಿವಿಜನಲ್ ಕಮಿಷನರನ್ನು ಹಾಕಿದ್ದೇವೆ.

2-30 P.M.

ಇವರ ಕೈಕೆಳಗೆ ಒಬ್ಬ ಸೀನಿಯರ್ ಐ.ಎ.ಎಸ್. ಆಫೀಸರನ್ನು ಹಾಕಿ ಒಂದು ಸೆಲ್‌ಮಾಡಿ, ಇಡೀ ಸಂಸ್ಥಾನದಲ್ಲಿ ಎಲ್ಲೆಲ್ಲಿ ಏನೇನು ಕೆಲಸಗಳು ನಡೆಯುತ್ತಿವೆ, ಆ ಕೆಲಸಕಾರ್ಯಗಳಿಗೆ ಪ್ರತಿ ಯೊಂದು ಜಿಲ್ಲೆಯಲ್ಲಿಯೂ ಹಣವನ್ನು ಸರಿಯಾಗಿ ಒದಗಿಸುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಸರ್ಕಾರಕ್ಕೆ ಆಗಿಂದಾಗ್ಗೆ ಒಂದು ವರದಿ ಒಪ್ಪಿಸಬೇಕೆಂಬ ಜವಾಬ್ದಾರಿಯನ್ನು ಆ ಸೆಲ್‌ಗೆ ವಹಿಸಿದ್ದೇವೆ. ಈ ಒಂದು ಮೆಷನರಿ ಪ್ರತ್ಯೇಕವಾಗಿ ಕ್ರಿಯೇಟ್ ಮಾಡುವ ಅವಶ್ಯಕತೆ ಏಕೆ ಬಂತು ಅಂದರೆ, ಎರಡೂವರೆ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಇನ್ನುಮುಂದೆ ಖರ್ಚುಮಾಡ ಬೇಕೆಂದಿದ್ದೇವೆ. ಹಣವಿಲ್ಲವೆಂದು ನಾವು ಹೇಳುವುದಿಲ್ಲ. ಜನರಲ್ಲಿ ಹಾಹಾಕಾರ ಇದ್ದಾಗ್ಗೆ, ಅನೇಕ ಜನರು ಕಷ್ಟದಲ್ಲಿರುವಾಗ ಜನರ ಗೋಳು ನಿವಾರಣೆಯಾಗಬೇಕು. ಅದಕ್ಕೆ ಬೇಕಾದಂಥ ಹಣವನ್ನು ಸಂಪೂರ್ಣವಾಗಿ ಒದಗಿಸುತ್ತೇವೆ. ಇವತ್ತಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡರೆ ಈ ಎರಡೂವರೆ ಕೋಟಿ ರೂಪಾಯಿಗಳು ಸಾಲದು. ಅದನ್ನು ಇನ್ನೂ ಹೆಚ್ಚುಮಾಡಬೇಕು. ಮುಂದಿನ ಎರಡು ತಿಂಗಳಲ್ಲಿ ಅಂದರೆ ಅಕ್ಟೋಬರ್ ಅಂತ್ಯದೊಳಗೆ 4 ಕೋಟಿ 7 ಲಕ್ಷ ರೂಪಾಯಿ ಗಳನ್ನು ಈ ಬಾಬಿಗಾಗಿ ನಾವು ಖರ್ಚು ಮಾಡಬೇಕೆಂದು ನಿರ್ಣಯಮಾಡಿದ್ದೇವೆ. ಕೇಂದ್ರ ಸರ್ಕಾರದವರ ಸ್ಟಡಿ ಟೀಂ ಬಂದಿದ್ದರು. ಅವರಲ್ಲಿಯೂ ಚರ್ಚೆಮಾಡಿದ್ದೇವೆ. ಅಭಾವ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಗಳಿಗಾಗಿ ಮತ್ತು ಆ ಪ್ರದೇಶಗಳಲ್ಲಿ ಕಷ್ಟದಿಂದ ನರಳುತ್ತಾ ಇರತಕ್ಕ ಜನಗಳಿಗೆ ಕೊಡುವುದಕ್ಕಾಗಿ ಈ 4 ಕೋಟಿ 7 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆ. ಅದನ್ನು ಇಷ್ಟರಲ್ಲಿಯೇ ಎಲ್ಲಾ ಕಡೆಯೂ ಹಂಚುತ್ತೇವೆ. ಈ 4 ಕೋಟಿ 7 ಲಕ್ಷ ರೂಪಾಯಿಗಳನ್ನು ಈ ರೀತಿಯಾಗಿ ಹಂಚಬೇಕೆಂದು ಉದ್ದೇಶಪಟ್ಟಿದ್ದೇವೆ. ರಿಲೀಫ್ ಕಾಮಗಾರಿಗಾಗಿ 150 ಲಕ್ಷ ರೂಪಾಯಿಗಳು, ಮೈನರ್ ಇರ್ರಿಗೇಷನ್ ವರ್ಕ್ಸ್‌ಗಾಗಿ 150 ಲಕ್ಷ ರೂಪಾಯಿ ಗಳು, ಫ್ರೀಡಿಸ್ಟ್ರಿಬ್ಯೂಷನ್ ಆಫ್ ಮೈಲೊಗಾಗಿ 48 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಇಟ್ಟಿದ್ದೇವೆ. ಜನರು ಕಷ್ಟದಲ್ಲಿದ್ದಾರೆಂದು ಕೂಡಲೇ ಗಂಜಿ ಕೇಂದ್ರಗಳನ್ನು ತೆರೆಯುತ್ತೇವೆಂದು ಹೇಳಿದ್ದೇವೆ. ಅವರಿಗೆ ಮೈಲೋ ಅನ್ನು ಪುಕ್ಕಟೆಯಾಗಿ ಹಂಚುವ ವಿಚಾರ ಮಾಡಿದ್ದೇವೆ. ಸಾಯಿಲ್ ಕನ್‌ಸರ್‌ವೇಷನ್ ಮತ್ತು ಕಾಂಟೂರ್ ಬಂಡಿಂಗಿಗೋಸ್ಕರ 36 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ. ಎಲ್ಲೆಲ್ಲಿ ಬಾವಿಗಳು ಇವೆಯೋ ಅವನ್ನು ಇನ್ನೂ ಡೀಪನ್ ಮಾಡುವುದಕ್ಕಾಗಿ ವ್ಯವಸ್ಥೆ ಮಾಡುತ್ತಿ ದ್ದೇವೆ. ನಮ್ಮಲ್ಲಿ ಬೋರಿಂಗ್ ಎಕ್ವಿಪ್‌ಮೆಂಟ್ಸ್ ಇಲ್ಲ, ಅದಕ್ಕೋಸ್ಕರ 25 ಲಕ್ಷ ರೂಪಾಯಿ ಗಳನ್ನು ಬೋರಿಂಗ್ ಎಕ್ವಿಪ್‌ಮೆಂಟ್ಸ್‌ನ್ನು ಖರೀದಿ ಮಾಡುವುದಕ್ಕೆ ಇಟ್ಟಿದ್ದೇವೆ. ಕೇಂದ್ರ ಸರ್ಕಾ ರಕ್ಕೆ ನಮಗೆ 20 ಇಂಪೋರ್ಟೆಡ್‌ರಿಗ್ಸ್ ಪರ್ಚೇಜ್ ಮಾಡುವುದಕ್ಕೆ ಪರ್ಮಿಷನ್ ಕೊಡಿ ಎಂಬದಾಗಿ

ನಾನು ಈಗಾಗಲೇ ಕೇಳಿದ್ದೇನೆ. ಅವುಗಳಿಂದ ದಿನಕ್ಕೆ ಒಂದೊಂದು ಬಾವಿಯನ್ನು ತಯಾರು ಮಾಡಬಹುದು. ಆದರಿಂದ 150 ಅಡಿಯಿಂದ 200 ಅಡಿಯವರೆಗೂ ಆಳ ತೋಡುವುದಕ್ಕೆ ಅನುಕೂಲವಾಗುತ್ತದೆ. ಈಗಾಗಲೇ ಎರಡು ವಾಲಂಟರಿ ಆರ್ಗನೈಜೇಷನ್ನುಗಳು ಆ ಕೆಲಸವನ್ನು ಮಾಡುತ್ತಿವೆ. ಬಾಗಲಕೋಟೆಯ ಹತ್ತಿರ ಮತ್ತು ಬೆಂಗಳೂರಿನ ಹತ್ತಿರ ಆ ರಿಗ್ಸ್ ಕೆಲಸ ಮಾಡುತ್ತಿವೆ. ಆದರೆ ಅವು ನಮ್ಮ ದೇಶದಲ್ಲಿ ಸಿಗುವುದಿಲ್ಲ. ಅದಕ್ಕಾಗಿ ಎರಡನೆಯ ದೇಶದಿಂದ ಅವನ್ನು ತರಿಸಿಕೊಳ್ಳಬೇಕಾಗುತ್ತದೆ. 20 ರಿಗ್ಸ್‌ನ್ನು ತರಿಸಿಕೊಳ್ಳುವುದಕ್ಕೆ ಪರವಾನಿಗೆ ಕೊಡಬೇಕೆಂದು ಕೇಳಿದ್ದೇವೆ. ಅಲ್ಲದೆ ಇದಕ್ಕೆ ಬೇಕಾದ ಫಾರಿನ್ ಎಕ್ಸ್‌ಚೇಂಜು ರಿಲೀಜ್ ಮಾಡಿಕೊಡಿ ಎಂಬುದಾಗಿ ಕೇಳಿದ್ದೇವೆ. ನಿನ್ನೆ ಉಪಪ್ರಧಾನ ಮಂತ್ರಿಗಳು ಬಂದಿದ್ದರು. ಅವರ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತಿದ್ದೇನೆ. ಇದರಿಂದ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ. ಈಗ ಎರಡೂವರೆ ಕೋಟಿ ಮತ್ತೆ 4 ಕೋಟಿ ಒಟ್ಟು ಸೇರಿ ಆರೂವರೆ ಕೋಟಿ ರೂಪಾಯಿಗಳನ್ನು ಅಕ್ಟೋಬರ್ ಅಂತ್ಯದೊಳಗೆ ಖರ್ಚುಮಾಡಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇನ್ನು ತಾಲ್ಲೂಕು ರಿಲೀಫ್ ಕಮಿಟಿಗಳು ಎಲ್ಲೆಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೋ ಅವನ್ನು ಬಹುಶಃ ನಿರ್ಣಯ ಮಾಡುತ್ತಾರೆ. ಆ ರೀತಿಯಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅವರಿಗೂ ಬೇಕಾದಷ್ಟು ಹಣವನ್ನು ಈಗಾಗಲೇ ಕೊಡುತ್ತಿದ್ದೇವೆ. ಇಷ್ಟೇ ಮಾಡಿದರೆ ಸಾಲದು ಎಂದು ಮೈನರ್ ಇರ್ರಿಗೇಷನ್ ಕೆಲಸಗಳನ್ನೂ ಆದಷ್ಟು ಜಾಗ್ರತೆಯಾಗಿ, ಚುರುಕಾಗಿ ಮಾಡಬೇಕೆಂದು ನಿರ್ಣಯಮಾಡಿದ್ದೇವೆ. ಇನ್ನು ಸ್ಪಿಲ್ಓವರ್ ವರ್ಕ್ಸ್ ಎಂಬುದಾಗಿ ಇನ್ನೂ 1,806 ಕೆಲಸಗಳಿವೆ. ಅದಕ್ಕೆ 10 ಕೋಟಿ 50 ಲಕ್ಷ ರೂಪಾಯಿಗಳು ಅವನ್ನು ಪೂರ್ತಿಯಾಗಿ ಮುಗಿಸುವುದಕ್ಕೆ ಬೇಕಾಗುತ್ತದೆ. ಆ ಕೆಲಸಗಳೂ ಸಹ ನಡೆಯುತ್ತಿವೆ. 1968 ನೇ ಇಸವಿ ಫೆಬ್ರವರಿ 15 ಕ್ಕೆ 110 ಹೊಸ ಕಾಮಗಾರಿಗಳನ್ನು ಮಂಜೂರು ಮಾಡಿದ್ದೇವೆ. ಈ ಬಾಬಿಗೆ 276.38 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಇನ್ನೂ 20 ಇತರ ಕೆಲಸಗಳನ್ನು ಮಾಡುವುದಕ್ಕಾಗಿ 76 ಲಕ್ಷ 64 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಹೀಗೆ 3 ಕೋಟಿ 53 ಲಕ್ಷ ಖರ್ಚಾಗುವಂಥ 130 ಹೊಸ ಕಾಮಗಾರಿಗಳನ್ನು ಈಗಾಗಲೇ ಮಂಜೂರು ಮಾಡಿದ್ದೇವೆ. ಅಲ್ಲದೆ ನಮ್ಮ ಚೀಫ್ ಇಂಜನಿಯರುಗಳಿಗೇ ಒಂದು ಅಧಿಕಾರ ಕೊಟ್ಟಿದ್ದೇವೆ. ಎಲ್ಲೆಲ್ಲಿ ಕಷ್ಟದ ಪರಿಸ್ಥಿತಿ, ಅಭಾವ ಪರಿಸ್ಥಿತಿ ಇದೆಯೋ ಅಂತಹ ಪ್ರದೇಶಗಳಲ್ಲಿ ಸುಮಾರು 2 ಕೋಟಿ ರೂಪಾಯಿಗಳಷ್ಟು ಕಾಮಗಾರಿಗಳು ಸರ್ಕಾರಕ್ಕೆ ಬರಲಾರದೆ ಅವರೇ ಅವನ್ನು ಮಂಜೂರು ಮಾಡಬೇಕೆಂದು ಅಧಿಕಾರ ಕೊಟ್ಟಿದೆ. ಅವರು ಅನೇಕ ಕೆಲಸಕಾರ್ಯಗಳನ್ನು ಮಂಜೂರು ಮಾಡುತ್ತಾರೆ. ಅದರ ಪ್ರಕಾರ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್, ಟೆಕ್ನಿಕಲ್ ಸ್ಯಾಂಕ್ಷನ್ ಮುಂಚಾಗಿ ಕೊಟ್ಟು ಏಜೆನ್ಸಿಯನ್ನು ನಿಗದಿ ಮಾಡುವುದಕ್ಕೆ ಬಹಳ ಸಮಯ ಬೇಕಾಗುತ್ತದೆ. ಈ ರೀತಿಯಾಗಿ ಖರ್ಚು ಮಾಡಿದರೆ ಇನ್‌ಫ್ರಕ್ಚುಯಸ್ ಎಕ್ಸ್‌ಪೆಂಡಿಚರ್ ಆಗುವುದಿಲ್ಲ. ಕಾಂಟೂರ್ ಬಂಡಿಂಗ್ ಸಲುವಾಗಿ ಸಾಯಿಲ್ ಕನ್‌ಸರ್‌ವೇಷನ್ ಸಲುವಾಗಿ, ಇರ್ರಿಗೇಷನ್ ಸಲುವಾಗಿ, ಮೈನರ್ ಇರಿಗೇಶನ್ ಸಲುವಾಗಿ ಖರ್ಚುಮಾಡಬೇಕೆಂದು ಲೆಕ್ಕಹಾಕಿ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ. ಸರ್ಕಾರದವರು ಎಷ್ಟು ಕೆಲಸಗಳನ್ನು ಮಂಜೂರುಮಾಡಿದ್ದಾರೆಂಬುದನ್ನು ಮೇಲೆಯೇ ಹೇಳಿದ್ದೇನೆ. ಈ ಕೆಲಸಗಳನ್ನು ಇಲಾಖೆಗಳ ಮೂಲಕ ಡಿಸ್ಟ್ರಿಕ್ಟ್ ಷೆಡ್ಯೂಲ್ ರೇಟಿನಲ್ಲಿ ಮತ್ತು ಪೀಸ್ ವರ್ಕ್ಸ್ ಮೇಲೆ ಕೂಡಲೇ ಪ್ರಾರಂಭ ಮಾಡಬೇಕೆಂದು ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ 67-68 ಮತ್ತು 68-69 ನೇ ಸಾಲಿನ ಕೆಲವು ಬಡ್ಜೆಟೆಡ್ ವರ್ಕ್ಸ್ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಮತ್ತು ಟೆಕ್ನಿಕಲ್ ಸ್ಯಾಂಕ್ಷನ್ನಿಗೆ ಸರ್ಕಾರಕ್ಕೆ ಬರಬೇಕಾಗಿಲ್ಲ, ಚೀಫ್ ಇಂಜನಿಯರುಗಳೇ ಅಂತಹುಗಳನ್ನು ಮಂಜೂರು ಮಾಡಬಹುದೆಂಬ ಅಧಿಕಾರವನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಕಾಮಗಾರಿಗಳು ಅರ್ಧಕ್ಕೇ ನಿಂತು ಹೋಗಿರುತ್ತವೋ, ಮೈನರ್ ಇರ್ರಿಗೇಷನ್ ಸ್ಕೀಮುಗಳು ಅರ್ಧಂಬರ್ಧವಾಗಿವೆಯೋ, ಎಲ್ಲೆಲ್ಲಿ ಕಂಟ್ರಾಕ್ಟರುಗಳು ಕೆಲಸಗಳನ್ನು ಪೂರ್ತಿಮಾಡದೇ ಬಿಟ್ಟಿರುತ್ತಾರೋ ಅವುಗಳನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಪ್ರಾರಂಭ ಮಾಡಬೇಕು ಮತ್ತು ಪೀಸ್ ವರ್ಕ್ಸ್ ಮೇಲೆ ಡಿಸ್ಟ್ರಿಕ್ಟ್ ಷೆಡ್ಯೂಲ್ಡ್ ರೇಟ್ ಪ್ರಕಾರ ಪ್ರಾರಂಭಮಾಡಿ ಎಂಬುದಾಗಿ ಹೇಳಿದ್ದೇವೆ. ಈ ರೀತಿ ಅಧಿಕಾರ ಕೊಟ್ಟಿದ್ದೇವೆ. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಆದರೆ ಅನೇಕ ಹೊಸ ಕಾಮಗಾರಿಗಳನ್ನು ಮೈನರ್ ಇರ್ರಿಗೇಷನ್ನಿನಲ್ಲಿ ತೆಗೆದುಕೊಳ್ಳುವುದಕ್ಕೆ ಕಷ್ಟವಿದೆ. ಏಕೆಂದರೆ ನಾವು ಸೀಲಿಂಗ್ ಲಿಮಿಟ್ಟನ್ನು ಹಾಕಿದ್ದೇವೆ. ಅದೇನೆಂದರೆ ನಾನ್ ಏರಿಡ್ ರೀಜಿಯನ್‌ನಲ್ಲಿ ಕೆಲಸಗಳು 50 ಸಾವಿರ ರೂಪಾಯಿಗಳಿಗಿಂತ ಕಡಮೆ ಇದ್ದರೆ ವರಮಾನ ಸೇಕಡ 2 ರಷ್ಟು ಮತ್ತು ಏರಿಡ್ ರೀಜಿಯನ್ನಿನಲ್ಲಿ ವರಮಾನ ಸೇಕಡ 1 ರಷ್ಟು ಬರಬೇಕೆಂದಿದೆ. ನಾನ್ ಏರಿಡ್ ರೀಜಿಯನ್‌ನಲ್ಲಿ ಕೆಲಸಗಳು 50 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇದ್ದರೆ ವರಮಾನ ಸೇಕಡ 3 ರಷ್ಟು ಮತ್ತು ಏರಿಡ್ ರೀಜಿಯನ್‌ನಲ್ಲಿ ವರಮಾನ ಸೇಕಡ 2 ರಷ್ಟು

(ಶ್ರೀ ವೀರೇಂದ್ರ ಪಾಟೀಲ್)

ಬರಬೇಕೆಂದಿದೆ. ಆದರೆ ಅನೇಕ ಕೆಲಸ ಕಾರ್ಯಗಳಿಗೆ ಆ ರೀತಿ ರಿಟರ್ನ್ ಬಾರದೇ ಇರುವುದರಿಂದ ಅನೇಕ ಇಂಜನಿಯರುಗಳು ಅದನ್ನು ಕಡಿಮೆ ಮಾಡಬೇಕೆಂದು ಹೇಳುತ್ತಿದ್ದಾರೆ. ಅಲ್ಲದೆ ಕನ್‌ಸ್ಟ್ರಕ್ಷನ್ ಕಾಸ್ಟ್ ಪರ್ ಏಕರ್ ಹೆಚ್ಚಾಗುತ್ತಾ ಇರುವುದರಿಂದ ಅದನ್ನು ಜಾಸ್ತಿ ಮಾಡಬೇಕೆಂದು ಸರ್ಕಾರದ ಪರ್ಮಿಷನ್ ಕೇಳುತ್ತಿದ್ದಾರೆ. ಮೊನ್ನೆ ತಾನೇ ಸರ್ಕಾರದವರು ಒಂದು ನಿರ್ಣಯವನ್ನು ಮಾಡಿದ್ದಾರೆ. ಏಕರೇಜ್ ಕಾಸ್ಟ್ ಸಾವಿರ ರೂಪಾಯಿಗಳ ಲಿಮಿಟ್ಟನ್ನು 1500 ರೂಪಾಯಿಗಳಿಗೆ ಏರಿಸಿದ್ದೇವೆ. ನೂರು ಎಕರೆಗಳು ಮತ್ತು ಅದಕ್ಕಿಂತ ಜಾಸ್ತಿ ಇದ್ದರೆ, 1250 ರೂಪಾಯಿಗಳ ಲಿಮಿಟ್ಟನ್ನು 1500 ರೂಪಾಯಿಗಳಿಗೆ ಏರಿಸಿದ್ದೇವೆ. ರೆಸ್ಟೋರೇಷನ್ ಕಾಸ್ಟ್ ಮೊದಲು 700 ರೂಪಾಯಿಗಳಿತ್ತು. ಅದನ್ನು ಈಗ ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ. ನಾನ್ ಏರಿಡ್ ರೀಜನ್‌ನಲ್ಲಿ ಸೇಕಡ 25 ರಷ್ಟು ರಿಟರ್ನ್ ಬಂದರೆ ಸಾಕು. ಏರಿಡ್ ರೀಜನ್‌ನಲ್ಲಿ ಸೇಕಡ. 25 ರಷ್ಟು ಬಂದರೆ ಸಾಕು. 100 ಎಕರೆಗಳು ಮತ್ತು ಅದಕ್ಕಿಂತ ಜಾಸ್ತಿಯಾಗಿದ್ದರೆ ನಾನ್ ಏರಿಡ್ ರೀಜನ್‌ನಲ್ಲಿ ಸೇಕಡ. 1 ರಷ್ಟು, ಏರಿಡ್ ರೀಜನ್‌ನಲ್ಲಿ ಸೇಕಡ. 7 ರಷ್ಟು ರಿಟರ್ನ್ ಬಂದರೆ ಸಾಕು. ಅದು ಮೊದಲು ಸೇಕಡ 3 ರಷ್ಟು ಮತ್ತು ಸೇಕಡ 2 ರಷ್ಟು ಇತ್ತು. ಈಗ ರಿಟರ್ನ್ ಸೇಕಡ. 7 ರಷ್ಟು ಬಂದರೆ ಸಾಕು ಎಂದು ಹೇಳಿದ್ದಾರೆ.

ಶ್ರೀ ಎಸ್. ಶಿವಪ್ಪ.—ಈ ವಿಚಾರವನ್ನು ಇಂಜನಿಯರುಗಳಿಗೆ ತಿಳಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಗಿದೆ. ಚೀಫ್ ಇಂಜಿನಿಯರುಗಳ ಮಾತನಾಡಿ ಈ ರೀತಿ ಕೊಟ್ಟರೆ ಯಾವ ಕೆಲಸ ಬೇಕಾದರೂ ಮಂಜೂರು ಮಾಡುವುದಕ್ಕೆ ಸಾಧ್ಯ. ಬಡ್ಜೆಟ್ಟಿನಲ್ಲಿ ಹಣವನ್ನು ಇಟ್ಟಿದ್ದೀರಿ. ನಿಮ್ಮಲ್ಲಿ ಬರುವ ಹಾಗೆ ಇಲ್ಲ, ನಾವು ಅವನ್ನು ಮಂಜೂರು ಮಾಡುತ್ತೇವೆಂದು ಅವರು ಹೇಳಿದ ಪ್ರಕಾರ ನಾವು ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಕ್ಯಾಬಿನೆಟ್‌ನಲ್ಲಿ ಸರ್ಕಾರದ ಪರವಾಗಿ ನಿರ್ಣಯವನ್ನು ತೆಗೆದುಕೊಂಡಿದ್ದು ಏನೆಂದರೆ ಈ ಬಡ್ಜೆಟ್ಟಿನಲ್ಲಿ ನಮೂದಿಸಲಾಗಿರುವ ಅನೇಕ ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕಾಗಿದ್ದರೆ ಇವುಗಳ ಬಗ್ಗೆ ಅಡ್ಮಿನಿಸ್ಟ್ರೇಟೀವ್ ಮತ್ತು ಟೆಕ್ನಿಕಲ್ ಮಂಜೂರಾತಿಗಾಗಿ ಅವು ಸರ್ಕಾರಕ್ಕೆ ಬರಬೇಕಾದ್ದಿಲ್ಲ. 5 ಲಕ್ಷ ರೂಪಾಯಿಗಳವರೆಗೆ ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸೂಪರಿನ್‌ಟೆಂಡೆಂಟ್ ಇಂಜಿನಿಯರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. 15 ಲಕ್ಷ ರೂಪಾಯಿಗಳ ವರೆಗೆ ಚೀಫ್ ಇಂಜಿನಿಯರು ಕೆಲಸಕಾರ್ಯಗಳಿಗೆ ಅಪ್ರೂವಲ್ ಕೊಟ್ಟು ಅವುಗಳನ್ನು ಪ್ರಾರಂಭ ಮಾಡಬಹುದು. ಅದು ಸರ್ಕಾರಕ್ಕೆ ಬರುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದೇವೆ. ಪ್ರತಿಯೊಂದು ಕೆಲಸಕ್ಕೂ ಸರ್ಕಾರದ ಹತ್ತಿರ ಬಂದರೆ ನಿಧಾನವಾಗುತ್ತದೆ ಎಂದು ಅಧಿಕಾರಿಗಳಿಗೆ ಎಷ್ಟು ಕೆಲಸಗಳನ್ನು ತೆಗೆದುಕೊಂಡು ಮಾಡಬೇಕೆಂದು ಮನಸ್ಸು ಇದೆಯೋ ಅಷ್ಟು ಕೆಲಸಗಳನ್ನೂ ಅವರು ಮಾಡಿಸಬಹುದು, ಎನ್ನುವ ದೃಷ್ಟಿಯಿಂದ ಈ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇವೆ. ಎರಡು ಕೋಟಿ ರೂಪಾಯಿಗಳ ಕೆಲಸಕಾರ್ಯಗಳನ್ನು ಸ್ಕೇರ್ಸಿಟಿ ಅಫೆಕ್ಟೆಡ್ ಏರಿಯಾದಲ್ಲಿ ಯಾವ ಯಾವ ಕೆಲಸಗಳ ಪ್ಲಾನು ಮತ್ತು ಎಸ್ಟಿಮೇಟುಗಳು ತಯಾರಾಗಿವೆಯೋ ಅವುಗಳನ್ನು ಜಾಗ್ರತೆಯಾಗಿ ಅಲ್ಲಲ್ಲೆ ಮಂಜೂರು ಮಾಡಿ ಕೆಲಸವನ್ನು ತ್ವರಿತವಾಗಿ ಪ್ರಾರಂಭಿಸಬೇಕೆಂದು ಅದರ ಸಂಪೂರ್ಣ ಅಧಿಕಾರವನ್ನು ಚೀಫ್ ಇಂಜಿನಿಯರಿಗೆ ಕೊಟ್ಟಿದ್ದೇವೆ. ಮುಂದಿನ ಅಕ್ಟೋಬರ್ ತಿಂಗಳ ಅಂತ್ಯದೊಳಗೆ ಈಗಾಗಲೇ ಖರ್ಚು ಮಾಡಬೇಕೆಂದು ಉದ್ದೇಶಿಸಿರುವ ಎರಡು ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 4 ಕೋಟಿ 7 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ತಡ ಮಾಡದೆ ಕೂಡಲೇ ಕೆಲಸಗಳನ್ನು ಪ್ರಾರಂಭ ಮಾಡುವಂತೆ ಹೇಳಿದ್ದೇವೆ. ಎಲ್ಲೆಲ್ಲಿ ತಕರಾರುಗಳು ಬಂದು ಕೆಲಸಕಾರ್ಯಗಳು ಆಗಿಲ್ಲವೋ ಅಂಥಾ ಕಡೆ ಅಧಿಕಾರಿಗಳಿಗೆ ಸಂಪೂರ್ಣವಾಗಿ ಪವರ್ಸ್ ಡಿಲಿಗೇಟ್ ಮಾಡಿ ಅವರು ಆ ತಕರಾರುಗಳನ್ನು ಬಗೆಹರಿಸಿ ಕೆಲಸಗಳನ್ನು ಪ್ರಾರಂಭ ಮಾಡುವಂತೆ ಹೇಳಿದ್ದೇವೆ. ಈ ರೀತಿಯಾಗಿ ಇವೊತ್ತು ಜನತೆಗೆ ಅನುಕೂಲ ಆಗಬೇಕು ಎನ್ನುವ ದೃಷ್ಟಿಯಿಂದ ನಾವು ಕೆಲಸ ಮಾಡುತ್ತಿದ್ದೇವೆ. ಮತ್ತು ಪರ್ಮನೆಂಟ್ ಮೇಜರ್ಸ್ ಬಗ್ಗೆ ಅನೇಕ ವಿಚಾರಗಳು ಸೂಚಿಸಲ್ಪಟ್ಟಿವೆ. ಇದಕ್ಕೆ ಸಂಬಂಧಪಟ್ಟ ಹಾಗೆ 40 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗುತ್ತಿದೆ. ಇದೇ ಫೈನಲ್ ರಿಪೋರ್ಟ್ ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಸಾಕಷ್ಟು ಪರಿಶೀಲನೆ ಮಾಡಬೇಕಾಗುತ್ತದೆ. ಪರ್ಮನೆಂಟ್ ರಿಲೀಫ್ ಮೆಜರ್ಸ್ ಹುಡುಕಬೇಕಾದರೆ ಯಾವ ಯಾವ ಏರಿಯಾದಲ್ಲಿ ಸಾಕಷ್ಟು ಮಳೆ

ಬರುವುದಿಲ್ಲ, ಎಲ್ಲೆಲ್ಲಿ ಪದೇ ಪದೇ ಸ್ಕೇರ್ಸಿಟಿ ಉದ್ಭವವಾಗುತ್ತದೆ ಎಂಬುದನ್ನು ನೋಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇದರ ಸಲುವಾಗಿ ಸಬ್‌ಸಾಯಿಲ್ ಕೆಲಸ ಪ್ರಾರಂಭ ಮಾಡಿದ್ದೇವೆ. ರಿಗ್ಸ್‌ಗಳನ್ನು ತರಿಸಿ ಹೆಚ್ಚಿನ ಪ್ರಮಾಣದಲ್ಲಿ ಬಾವಿಗಳನ್ನು ತೋಡಿಸಬೇಕೆಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಹೆಚ್ಚಿನ ಮಟ್ಟದಲ್ಲಿ ಇರಿಗೇಷನ್ ವರ್ಕ್ಸ್‌ಗೆ ಪ್ರಾಶಸ್ತ್ಯ ಕೊಡಬೇಕೆಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಕಾಂಟೂರ್ ಬಂಡಿಂಗ್, ಸಾಯಿಲ್ ಕನ್‌ಸರ್‌ವೇಷನ್ ಕೆಲಸಕಾರ್ಯಗಳು ನಡೆಯುತ್ತಿವೆ. ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಸ್ಟೋರೇಜ್ ಟ್ಯಾಂಕ್ಸ್ ಮಾಡಬೇಕು. ಇದರಿಂದ ಯಾವಾಗಬೇಕಾದರೂ ನೀರು ಬರಬಹುದು. ಟ್ಯಾಂಕಿನಲ್ಲಿ ನೀರು ನಿಂತರೆ, ಬಾವಿಗಳನ್ನು ತೋಡಿಸಿದರೆ ಅನುಕೂಲವಾಗುತ್ತದೆ. ನಾವು ಈ ಎಲ್ಲಾ ಪರ್ಮನೆಂಟ್ ಮೆಜರ್ಸ್ ತೆಗೆದುಕೊಂಡರೆ ಇನ್ನು ಮುಂದೆ ನಮಗೆ ಕ್ಷಾಮ ಬರುವುದಿಲ್ಲ. ಈ ರೀತಿಯಾಗಿ ಒಂದು ಲಾಂಗ್‌ರೇಂಜ್ ಪ್ರೋಗ್ರಾಮ್ ಇಟ್ಟುಕೊಂಡು ಒಂದು ಪ್ಲಾನ್ ಪ್ರಾಜೆಕ್ಟ್ ತಯಾರು ಮಾಡಬೇಕು. ಅದನ್ನು ಈಗಾಗಲೇ ನಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆ ಈ ಹೊತ್ತು ದೇಶದಲ್ಲಿ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ಈಗಾಗಲೇ ಎಲ್ಲೆಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಕೈಗೊಂಡಿದ್ದೇವೆ. ಜನಗಳಿಗೆ ಆಹಾರ ಧಾನ್ಯವನ್ನು ಒದಗಿಸತಕ್ಕ ವಿಚಾರದಲ್ಲಿ ನಾವು ಏನೇನು ವ್ಯವಸ್ಥೆ ಮಾಡಿದ್ದೇವೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಕೆಲವು ತತ್ವಗಳನ್ನು ನಾನು ಹೇಳಬೇಕಾದ್ದು ಅವಶ್ಯ. ಆಹಾರ ಧಾನ್ಯಗಳ ಬಗ್ಗೆ ಹೇಳಬೇಕಾಗಿದ್ದರೆ ಈಗಾಗಲೇ ಸರ್ಕಾರದವರು ಎಲ್ಲೆಲ್ಲಿ ಅವಶ್ಯಕವೋ ಅಲ್ಲಿ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೇವೆ. ಅದರ ಸಮೀಪದ ಸ್ಥಳಗಳಲ್ಲಿ ತಾತ್ಕಾಲಿಕ ಆಹಾರಧಾನ್ಯ ಪೂರೈಕೆಯ ಅಂಗಡಿಗಳನ್ನು ತೆರೆಯಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದ್ದೇವೆ. ಎಲ್ಲೆಲ್ಲಿ ಆ ರೀತಿ ಆಹಾರ ಧಾನ್ಯದ ಅಂಗಡಿಗಳನ್ನು ತೆರೆಯಬೇಕೆಂಬ ಅವಶ್ಯಕತೆ ಇದೆಯೋ ಅಂಥಾ ಸ್ಥಳಗಳಲ್ಲಿ ಆ ಅಂಗಡಿಗಳನ್ನು ತೆರೆಯಲು ಡೆಪ್ಯುಟಿ ಕಮೀಷನರು ಅದಕ್ಕೆ ವ್ಯವಸ್ಥೆ ಮಾಡುತ್ತಾರೆ ಈ ಮಾನ್ಯ ಸಭೆಗೆ ಇನ್ನೊಂದು ವಿಚಾರವನ್ನು ಹೇಳಬೇಕು ಎಂದರೆ ಈಗ ನಮ್ಮಲ್ಲಿ ಆಹಾರ ಧಾನ್ಯ ಸಾಕಷ್ಟು ಇದೆ. ಬಫರ್ ಸ್ಟಾಕ್ ಮುಖಾಂತರ ನಾವು ಆಹಾರ ಧಾನ್ಯವನ್ನು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಮೈಲೋ ಮತ್ತು ಜೋಳವನ್ನು ಸಾಕಷ್ಟು ಪ್ರಮಾಣದಲ್ಲಿ ಇಟ್ಟುಕೊಂಡಿದ್ದೇವೆ. ಜನತೆಗೆ ಯಾವ ಯಾವ ಜಿಲ್ಲೆಗಳಲ್ಲಿ ಬೇಕಾಗುತ್ತದೆಯೋ ಆಯಾ ಜಿಲ್ಲೆಗೆ ಅವನ್ನು ಕಳುಹಿಸುವಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಜೂನ್, ಜುಲೈ ಆಗಸ್ಟ್ ತಿಂಗಳಿನಲ್ಲಿ ನಮ್ಮ ಹತ್ತಿರ ಆಹಾರದ ಪರಿಸ್ಥಿತಿ ಹದಗೆಟ್ಟಿತ್ತು. ಅದಕ್ಕಾಗಿ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡು ನಮಗೆ ಕಷ್ಟಪರಿಸ್ಥಿತಿ ಉಂಟಾಗಿದೆ, ಅದಕ್ಕಾಗಿ ಹೆಚ್ಚಿನ ಮಟ್ಟದಲ್ಲಿ ನಮಗೆ ಆಹಾರ ಧಾನ್ಯಗಳನ್ನು ಸಹಾಯ ಮಾಡಬೇಕೆಂದು ಕೇಳಿದ್ದೆವು. ಅವರು ನಮಗೆ ಪ್ರತಿ ವರ್ಷ ಎಷ್ಟು ಕೋಟಾ ಕೊಡುತ್ತಿದ್ದರೋ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕು ಎಂದು ನಾವು ಕೇಳಿದಾಗ ಕೇಂದ್ರ ಸರ್ಕಾರದವರು ಅದನ್ನು ಮಾನ್ಯ ಮಾಡಿ 10 ಸಾವಿರ ಟನ್ ಗೋಧಿ ಕೊಡುತ್ತಾ ಇದ್ದುದನ್ನು 30 ಸಾವಿರ ಟನ್ನಿಗೆ ಏರಿಸಿದ್ದಾರೆ. ಮೈಲೋ 5 ಸಾವಿರ ಟನ್ ಕೊಡುತ್ತಿದ್ದುದನ್ನು 15 ಸಾವಿರ ಟನ್ನಿಗೆ ಏರಿಸಿದ್ದಾರೆ. ಈ ರೀತಿ ಕೇಂದ್ರ ಸರ್ಕಾರದವರು ನಮಗೆ ಆಹಾರ ಧಾನ್ಯವನ್ನು ಸಹಾಯ ಮಾಡುತ್ತಾ ಇರುವುದರ ಜೊತೆಗೆ ಸ್ವಲ್ಪ ಮಟ್ಟಿಗೆ ಬಫರ್ ಸ್ಟಾಕ್ ಮಾಡಿಕೊಂಡಿರುವುದರಿಂದ ಆಹಾರದ ಬಗ್ಗೆ ಕಷ್ಟ ಬರುವುದಿಲ್ಲ. ಎಲ್ಲಾದರೂ ಜನತೆಗೆ ಆಹಾರಬೇಕು, ಆಹಾರದ ಬಗ್ಗೆ ಕಷ್ಟ ಇದೆ ಎಂದರೆ ನಾವು ಅಲ್ಲಿಗೆ ಆಹಾರವನ್ನು ಕಳುಹಿಸುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈಗಾಗಲೇ ಎಮರ್ಜೆನ್ಸಿ ಫೀಡಿಂಗ್ ಸೆಂಟರುಗಳನ್ನು ಮಾಡಿ ಅವುಗಳ ಮೂಲಕ 6 ಲಕ್ಷ ಜನಗಳಿಗೆ ಫೀಡಿಂಗ್ ಕಾರ್ಯಕ್ರಮ ನಡೆಯುತ್ತಿದೆ. ಇದರ ಜೊತೆಗೆ ಶಾಲಾ ಮಕ್ಕಳಿಗೆ ಕೂಡ ಎಮರ್ಜೆನ್ಸಿ ಫೀಡಿಂಗ್ ನಡೆಯುತ್ತಿದೆ. ಇನ್ನು ಮುಂದೆ ಒಟ್ಟು $9\frac{1}{2}$ ಲಕ್ಷ ಜನಗಳಿಗೆ ಎಮರ್ಜೆನ್ಸಿ ಫೀಡಿಂಗ್ ಪ್ರೋಗ್ರಾಮ್ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿಕೊಂಡಿದ್ದೇವೆ. ಎಲ್ಲೆಲ್ಲಿ ಜನತೆಗೆ ಕಷ್ಟ ಇದೆಯೋ ಅಂಥಾ ಕಡೆ ಉಚಿತವಾಗಿ ಒಂದು ಸಾವಿರ ಟನ್ ಮೈಲೋ ಅನ್ನು ಪ್ರತಿ ತಿಂಗಳು ಹಂಚುತ್ತಿದ್ದೇವೆ. ಈ ಕಾರ್ಯವನ್ನು ಮಾಡುವುದಕ್ಕೆ ಈ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ. ಭಾರತ್ ಸೇವಕ ಸಮಾಜದವರು 32 ಸಾವಿರ ಕ್ವಿಂಟಾಲ್ ಆಹಾರ ಧಾನ್ಯವನ್ನು ಜನಗಳಿಗೆ ಹಂಚತಕ್ಕ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಅದನ್ನು ಪ್ರಾರಂಭ ಮಾಡಿದ್ದಾರೆ. ಈ ರೀತಿಯಿಂದ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ನಾವು ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ.

(ಶ್ರೀ ವೀರೇಂದ್ರ ಪಾಟೀಲ್)

ಇನ್ನು ಕೆಲವು ಮಾನ್ಯ ಸದಸ್ಯರು ಲ್ಯಾಂಡ್ ರೆವಿನ್ಯೂ ವಿಚಾರವನ್ನು ಹೇಳಿದ್ದಾರೆ. ಲ್ಯಾಂಡ್ ರೆವಿನ್ಯೂ ಕಲೆಕ್ಷನ್ ಬಗ್ಗೆ ಜನತೆ ಎಲ್ಲಿ ಕಷ್ಟದಲ್ಲಿದ್ದಾರೆ ಅಲ್ಲಿ ಲ್ಯಾಂಡ್ ರೆವಿನ್ಯೂ ಸಸ್ಪೆಂಡ್ ಮಾಡಿ ಮುಂದಕ್ಕೆ ಹಾಕಿ ಎಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ ಒಂದು ವೇಳೆ ಎಲ್ಲೆಲ್ಲಿ ಲ್ಯಾಂಡ್ ರೆವಿನ್ಯೂ ರಿಮಿಷನ್ ಮಾಡುವ ಅವಶ್ಯಕತೆ ಇದೆಯೋ ಅಂಥಾ ಕಡೆ ರಿಮಿಷನ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಲಾಗಿದೆ. ಇದರ ಬಗ್ಗೆ ಡಿಸ್‌ಕ್ರಿಷನ್ ಉಪಯೋಗಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ಡೆಪ್ಯುಟಿ ಕಮೀಷನರಿಗೆ ವಹಿಸಿಕೊಡಲಾಗಿದೆ. ಈಗಾಗಲೇ 7 ಸಾವಿರ ಹಳ್ಳಿಗಳಲ್ಲಿ ಲ್ಯಾಂಡ್ ರೆವಿನ್ಯೂ ಸಸ್ಪೆಂಡ್ ಮಾಡಿದೆ. ಅಮೇಲೆ ಫ್ಲಡ್ಸ್ ಅಫೆಕ್ಟೆಡ್ ಏರಿಯಾ ಬಗ್ಗೆ ಮಾನ್ಯ ಸದಸ್ಯರು ಕೆಲವರು ಮಾತನಾಡಿದ್ದಾರೆ. ಒಂದು ಕಡೆ ಮಳೆ ಬಾರದೆ ಅನಾವೃಷ್ಟಿಯುಂಟಾಗಿ ಜನತೆ ಕಷ್ಟ ಪರಿಸ್ಥಿತಿಗೆ ಒಳಗಾಗಿದ್ದರೆ, ಇನ್ನೊಂದು ಕಡೆ ಎರಡು ಜಿಲ್ಲೆಗಳಲ್ಲ ಅತಿಯಾಗಿ ಮಳೆಯಾಗಿ ಪ್ರವಾಹ ಬಂದು ಜನ ಕಷ್ಟಕ್ಕೊಳಗಾಗಿದ್ದಾರೆ. ಅದರಲ್ಲಿ ಯಾರು ಯಾರು ಜೀವವನ್ನು ಕಳೆದುಕೊಂಡಿದ್ದಾರೆಯೋ ಅವರ ಸಂಸಾರಕ್ಕೆ ಒಂದೊಂದು ಸಾವಿರ ರೂಪಾಯಿ ಡಿಸ್‌ಕ್ರಿಷನರಿ ಗ್ರ್ಯಾಂಟ್ ಕೊಟ್ಟಿದ್ದೇವೆ. ಇನ್ನೂ ಕೆಲವರಿಗೆ ಪ್ರವಾಹದಿಂದ ತೊಂದರೆಯಾಗಿರುವವರಿಗೆ ದುಡ್ಡನ್ನು ಹಂಚಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಪ್ರವಾಹದಿಂದ ನೊಂದವರಿಗೆ ಇನ್ನೂ ಹೆಚ್ಚಿನ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರದವರು ಕೇರಳಕ್ಕೆ ಒಂದು ಕೋಟಿ ರ ಪಾಯಿಗಳನ್ನು ಸಹಾಯ ಮಾಡಿದ್ದಾರೆ. ನಮ್ಮಲ್ಲಿ ಪ್ರವಾಹದಿಂದ ಕೇರಳದಲ್ಲಿ ಅನಾಹುತವಾಗಿರುವಷ್ಟು ಆಗದಿದ್ದರೂ ಎರಡು ಜಿಲ್ಲೆಗಳಲ್ಲಿ ಅನಾಹುತವಾಗಿದೆ. ಅದರ ಸಲುವಾಗಿ ನಮಗೆ ಸಹಾಯ ಮಾಡಬೇಕೆಂದು ನಾವು ಕೇಂದ್ರಕ್ಕೆ ಬರೆದುಕೊಂಡಿದ್ದೇವೆ. ನಾನು ಮೊನ್ನೆ ಪ್ರಧಾನಿಯವರ ಜೊತೆಯಲ್ಲಿ ಈ ವಿಷಯವನ್ನು ಚರ್ಚೆಮಾಡಿದ್ದೇನೆ. ಬಹುಶಃ ಅವರು ನಮಗೆ ಸಹಾಯ ಮಾಡಬಹುದು ಎನ್ನುವ ನಂಬಿಕೆ ನನಗೆ ಇದೆ. ಜನತೆ ಕಷ್ಟದಲ್ಲಿದ್ದಾರೆಂದು ಅದಕ್ಕೆ ಪರಿಹಾರವನ್ನು ಕೊಡಲು ಯಾವ ರೀತಿಯಿಂದ ಸಹಾಯ ಮಾಡಬೇಕೆಂದು ಡೆಪ್ಯುಟಿ ಕಮೀಷನರ ಜೊತೆಯಲ್ಲಿ ಚರ್ಚೆ ಮಾಡಿ ಆ ಸಹಾಯವನ್ನು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಎಲ್ಲ ವಿಚಾರಗಳನ್ನೂ ಬಹುಶಃ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಮತ್ತು ನಮ್ಮ ಅಧಿಕಾರಿಗಳು ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತಾರೋ ಅವುಗಳನ್ನು ಕೈಗೊಳ್ಳುವಂತೆ ಮಾಡಿ ಜನಗಳಿಗಿರುವ ಕಷ್ಟವನ್ನು ಹೋಗಲಾಡಿಸುವುದಕ್ಕೆ ಏನೇನು ಮಾಡಬೇಕೋ ಅವನ್ನೆಲ್ಲಾ ಮಾಡುತ್ತೇವೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಾನು ಈವರೆಗೂ ಹೇಳಿರತಕ್ಕ ಕೆಲವು ವಿಚಾರಗಳನ್ನು ಒಳಗೊಂಡಿರತಕ್ಕ ಒಂದು ಮೋಷನ್ ತರಬೇಕೆಂಬ ಅಭಿಪ್ರಾಯಕ್ಕೆ ಅನುಗುಣವಾಗಿ ಇಲ್ಲಿ ಒಂದು ಮೋಷನ್ ತಂದಿದ್ದೇನೆ ಅದನ್ನು ಮೂವ್ ಮಾಡುತ್ತೇನೆ.

I will move the substantive motion:

"Having taken into account the acute scarcity conditions in 17 out of the 19 Districts of the State and the efforts made so far to provide relief, the House resolves that in view of the grave deterioration of the conditions, the scale of relief operations has to be stepped up very considerably and quickly. The scope and nature of these operations have to be widened. The Central assistance of Rs. 2.5 crores made on the basis of the assessment of the situation in June 1968 is grossly inadequate to meet the greatly worsened position today. It further resolves that to meet even the minimum demands of the situation, Central assistance of Rs. 20 crores would be definitely required as distress conditions will not abate before the next monsoon *viz.*, June 1969. The Government of India may be approached in the matter.

The purpose for which these grants can be expended should include not only works which provide immediate relief and employment but also measures to provide permanent relief and insurance against appearance of distress as a result of failure of monsoons."

Mr. SPEAKER.—Motion moved:

"Having taken into account the acute scarcity conditions in 17 out of the 19 Districts of the State and the efforts made so far to provide relief, the House resolves that in view of the grave deterioration of the conditions, the scale of relief operations has to be stepped up very considerably and quickly. The scope and nature of these operations have to be widened. The Central assistance of Rs. 2.5 crores made on the basis of the assessment of the situation in June 1968 is grossly inadequate to meet the greatly worsened position to-day. It further resolves that to meet even the minimum demands of the situation, Central assistance of Rs. 20 crores would be definitely required as distress conditions will not abate before the next monsoon *vi* ., June 1969. The Government of India may be approached in the matter.

The purpose for which these grants can be expended should include not only works which provide immediate relief and employment but also measures to provide permanent relief and insurance against appearance of distress as a result of failure of monsoons."

Sri B. P. GANGADHAR.—What is the total food quantity that is available as buffer stock with the Government to meet the situation?

Sri H. SIDDAVEERAPPA.—I do not know why the Chief Minister is so touchy in giving the exact stock position. What worries me is that in this year we may find it rather hard to get the necessary quantities. In some places where distress relief works are going on, not even one K.G. of grain is available to the workers. I am saying this with sense of responsibility. The people of the State should be assured with adequate quantity of grains. For this, procurement may be made from the neighbouring States. I do not know what is the position in the State. If the import is stopped, I am sure the State Government will have to face a very serious situation. I do not know what prevents him to give actual position. I would like to appeal to him to make adequate supplies readily available to tide over the situations till the end of March 1969 till we get rabi crop. Then Sir, they have allotted Rs. 17 crores. My own feeling is that this amount is grossly inadequate. Regarding the screening of the staff about which I am very particular. I appreciate the Chief Minister because he has candidly expressed that the *screening* of the staff is necessary. With regard to the appointment of Commissioner, I am told you are contemplating to appoint a person

(SRI H. SIDDAVEERAPPA)

for this post. He should be a man of mature brain with rich experienceand he should be above all politics because he is the king pin and his junior officers should also be the senior I.A.S. Officers. Some names have appeared in the Press for these posts. I am not concerned with that. But please see a topmost man is appointed in this very important post. I am glad you have mentioned that politics should not be brought in. I share with your views. This should be observed on both the sides.

†ಶ್ರೀ ಎಸ್. ಶಿವಪ್ಪ.—ಸ್ವಾಮೀ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಇವೊತ್ತು ಸುಮಾರು 4.7 ಕೋಟಿಗಿಂತಲೂ ಹೆಚ್ಚಾಗಿ ಖರ್ಚು ಮಾಡುತ್ತೇವೆ ಮತ್ತು ಸೆಂಟ್ರಲ್ ಗವರ್ನಮೆಂಟಿನಿಂದ ಇನ್ನೂ ಇಪ್ಪತ್ತು ಕೋಟಿಯಷ್ಟನ್ನು ಹೆಚ್ಚಾಗಿ ಕೇಳಬೇಕು ಎಂದು ಅವರ ನಿರ್ಣಯದಲ್ಲಿ ಮಂಡಿಸಿದ್ದಾರೆ. ಇದನ್ನು ನಾನು ಸಮರ್ಥನೆ ಮಾಡುತ್ತಾ ಅವರು ಕೇಳಿರತಕ್ಕ ಹಣ ಸುಮಾರು ಇಪ್ಪತ್ತು ಕೋಟಿಯಷ್ಟು ಎಂದು ಇರುವುದನ್ನು ನಲವತ್ತು ಕೋಟಿಯವರೆಗೆ ಏರಿಸಬೇಕಾಗಿತ್ತು ಮತ್ತು ಸರಕಾರದ ವತಿಯಿಂದ ಇದಕ್ಕೆ ಬೇಕಾದ ಅಂಕೆ ಅಂಶಗಳನ್ನು ಕೇಂದ್ರ ಸರಕಾರಕ್ಕೆ ಒದಗಿಸಿ ಈ ದೇಶದಲ್ಲಿರುವ ಕ್ಷಾಮವನ್ನು ನಿವಾರಣೆ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಒಂದು ಹೊತ್ತಿಗೆ ಒಬ್ಬರಿಗೆ ಅನ್ನ ಕೊಡಬೇಕೆಂದು ಪ್ರಯತ್ನ ಮಾಡಿದರೂ ಸರಕಾರಕ್ಕೆ ಒಂದು ದಿನಕ್ಕೆ ಸುಮಾರು 50 ಲಕ್ಷ ಖರ್ಚು ಬರುತ್ತದೆ. ಕೇಂದ್ರದವರು ಮದ್ರಾಸಿಗೆ ಹಾಗೂ ಕೇರಳಕ್ಕೆ ಕ್ಷಾಮ ನಿವಾರಣೆಗಾಗಿ ಸಹಾಯ ಮಾಡಿದ್ದಾರೆ. ನಮ್ಮಲ್ಲೂ ರಿಲೀಫ್ ಮೆಜರ್ಸ್‌ಗಳನ್ನು ಮಾಡುವಾಗ ಇರಿಗೇಷನ್ ಪ್ರಾಜೆಕ್ಟ್‌ಗಳನ್ನೂ ಸೇರಿಸಿಕೊಳ್ಳಬೇಕಾಗುತ್ತದೆ ಎಂದು ಪುನ: ಸರಕಾರದ ಗಮನಕ್ಕೆ ತರುತ್ತೇನೆ. ತಾವೇನು ಹಣವನ್ನು ಅಧಿಕಾರಿಗಳ ಕೈಯ್ಯಲ್ಲಿ ಕೊಡುತ್ತೀರೋ ಅದನ್ನು ಆ ಅಧಿಕಾರಿಗಳು ಸರಿಯಾಗಿ ಖರ್ಚು ಮಾಡದೇ ಹೋದರೆ ಅಂತಹವರ ಮೇಲೆ ಉಗ್ರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಒಂದು ದಿಟ್ಟ ಹೆಜ್ಜೆಯನ್ನು ಇಡಬೇಕೆಂದು ಸಲಹೆ ಮಾಡುತ್ತೇನೆ. ತಾವು ಹೇಗೆ ಕೆಲಸ ಮಾಡಬೇಕು ಎನ್ನುವುದಕ್ಕೆ ನಮ್ಮ ಜಿಲ್ಲೆಯ ಬಗ್ಗೇನೇ ಉದಾಹರಣೆ ಕೊಡುತ್ತೇನೆ. ಮಾನ್ಯ ರೆವೆನ್ಯೂ ಮಂತ್ರಿಗಳು ಕ್ಷಾಮದ ಸ್ಥಿತಿಯನ್ನು ಅರಿಯಲು ನಮ್ಮ ಜಿಲ್ಲೆಗೆ ಪ್ರವಾಸ ಬಂದಾಗ ಅಲ್ಲಿದ್ದ ಜಿಲ್ಲಾಧಿಕಾರಿಗಳೊಡನೆ, ಸಬ್ ಡಿವಿಜನ್ ಅಧಿಕಾರಿಗಳೊಡನೆ ಹಾಗೂ ತಾಲ್ಲೂಕಿನ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿದಾಗ ಅಲ್ಲಿದ್ದ ವಿಚಾರಗಳು ಇಲ್ಲಿಯವರೆಗೂ ಮಂತ್ರಿಗಳಿಗೆ ತಿಳಿದೇ ಇರಲಿಲ್ಲ. ಅಮೇಲೆ ಬೆಂಗಳೂರಿಗೆ ಬಂದಾಗ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಂಡರು. ಮತ್ತು ರಿಲೀಫ್ ಕಮಿಟಿಗಳನ್ನು ಮಾಡುವಾಗ ಇದರಲ್ಲಿ ವಿರೋಧ ಪಕ್ಷಗಳೂ ಇರಬೇಕು ಕಾಂಗ್ರೆಸ್ ಪಕ್ಷವೂ ಇರಬೇಕು, ಎಲ್ಲರಿಗೂ ಸಮವಾದ ಹಕ್ಕುಗಳು ಇರಬೇಕು. ಆದುದರಿಂದ 50 : 50, ಎಂದರೆ ಅರ್ಧದಷ್ಟು ಪ್ರಾತಿನಿಧ್ಯವನ್ನು ಇಟ್ಟುಕೊಂಡು ಮಾಡಿದರೆ ಕ್ಷಾಮ ನಿವಾರಣೆ ಕಾರ್ಯ ಮಾಡುವಾಗ ಅನುಕೂಲವಾಗುತ್ತದೆ. ಇದನ್ನು ತಾವು ಮಾಡಬೇಕು ಎಂದು ಸೂಚನೆ ಕೊಡುತ್ತೇನೆ. ಇನ್ನು ಆಹಾರದ ವಿಷಯದಲ್ಲಿ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದ ಹಾಗೆ, ಕೇಂದ್ರ ಸರ್ಕಾರದವರು ಕಳೆದ ಎರಡು ವರ್ಷಗಳಿಂದ ನಮ್ಮ ರಾಜ್ಯಕ್ಕೆ ಎಷ್ಟು ಆಹಾರ ಧಾನ್ಯಗಳನ್ನು ಸರಬರಾಜು ಮಾಡಿದ್ದಾರೆ ? ಈಗ ಆ ಮಾಮೂಲು ಸರಬರಾಜಿಗಿಂತ ಈ ವರ್ಷ ಬರಗಾಲ ಬಂದಿರುವುದರಿಂದ ಅವರು ಎಷ್ಟು ಆಹಾರ ಸಾಮಗ್ರಿಗಳನ್ನು ಹೆಚ್ಚಿಗೆ ಕಳುಹಿಸಿದ್ದಾರೆ ಎಂಬುದನ್ನು ಕೇಳುವುದಕ್ಕೆ ಹೊರಟರೆ, ದಯವಿಟ್ಟು ಈ ಸಂದರ್ಭದಲ್ಲಿ ಆ ಅಂಕೀ ಅಂಶಗಳನ್ನು ಮಾತ್ರ ಕೇಳಬೇಡಿ ಎನ್ನುತ್ತಾರೆ. ಅದ್ದರಿಂದ ಇದು ಏನೇ ಇರಲಿ ರಾಜ್ಯದಲ್ಲಿ ನಾನು ಆಗಲೇ ಹೇಳಿದ ಹಾಗೆ ಸಾಕಷ್ಟು ಧಾನ್ಯವನ್ನು ದಾಸ್ತಾನು ಮಾಡಿಕೊಂಡು ಪ್ರತಿಯೊಂದು ತಾಲ್ಲೂಕಿಗೂ ಯಾವ ಒಂದು ತಾರತಮ್ಯವನ್ನೂ ಮಾಡದೆ ಮುಂದಿನ ಅಧಿವೇಶನದ ಕಾಲಕ್ಕೆ ಸರ್ಕಾರದವರು ಸಾಧ್ಯವಾದ ಮಟ್ಟಿಗೂ ನಿರ್ವಂಚನೆಯಿಂದ ಕಷ್ಟಪಟ್ಟು ಕೆಲಸ ಮಾಡಿದ್ದಾರೆಂಬ ಒಂದು ಒಳ್ಳೆಯ ಹೆಸರನ್ನು ಪಡೆಯತಕ್ಕ ದೃಷ್ಟಿಯಿಂದ ಒಳ್ಳೇ ರೀತಿಯಲ್ಲಿ ಕೆಲಸ ಮಾಡಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—I shall permit one question each subject with a time-limit of 15 minutes. The motion will be put to vote at 3-15 p.m.

3-00 P.M.

ಶ್ರೀ ಎ. ಆರ್. ಪಂಚಗಾವಿ (ಅರಭಾವಿ).—ಮುಂಬೈ ಕರ್ಣಾಟಕದಲ್ಲಿ ಸ್ಕೇರ್ಸಿಟಿ ಕಂಡೀಷನ್ ನಿವಾರಣೆಗಾಗಿ ತೆಗೆದಿಟ್ಟಿರತಕ್ಕ ಹಣದಲ್ಲಿ ಕೇವಲ ಮೂರನೆ ಒಂದು ಭಾಗದಷ್ಟು ಮಾತ್ರ ಹಣವನ್ನು ಖರ್ಚು ಮಾಡಿರತಕ್ಕದ್ದು ಸರಿಯೇ ಮತ್ತು ಅಲ್ಲಿ ಸಾಮೂಹಿಕ ಬಾವಿಗಳನ್ನು ಮಾಡಿಸುವುದಾಗಿ ಹೇಳಿ ಇಲ್ಲಿಯತನಕ ಏಕೆ ಕೆಲಸವನ್ನು ಕೈಗೊಂಡಿಲ್ಲ ಮತ್ತು ಇಲ್ಲಿ ಬೆಂಗಳೂರು ಸುತ್ತ ಮುತ್ತ ಮಾತ್ರ ಸ್ಕೇರ್ಸಿಟಿ ಫೀಡಿಂಗ್ ಸೆಂಟರುಗಳನ್ನು ತೆರೆದಿದ್ದಾರೆ, ಅವುಗಳನ್ನು ಇಡೀ ರಾಜ್ಯಾದ್ಯಂತವೂ ಎಲ್ಲಾ ಜಿಲ್ಲೆಗಳಲ್ಲೂ ತೆಗೆಯುವುದಕ್ಕೆ ಏಕೆ ಪ್ರಯತ್ನ ಮಾಡಿಲ್ಲ ಎಂಬ ಈ ಮೂರು ಅಂಶಗಳಿಗೆ ಉತ್ತರವನ್ನು ಹೇಳಬೇಕು.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ತಾಲ್ಲೂಕ್ ಲೆವಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ತಾಲ್ಲೂಕ್ ಬೋರ್ಡ್ ಅಧ್ಯಕ್ಷರೂ, ಉಪಾಧ್ಯಕ್ಷರೂ ಮತ್ತು ತಾಶೀಲ್ದಾರರೂ ಮತ್ತು ಆ ಸ್ಥಳೀಯ ಎಂ.ಎಲ್.ಎ.ಗಳು ಮತ್ತು ಎಂ.ಎಲ್.ಸಿ.ಗಳು ಇದ್ದು ಅಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಆ ಕಮಿಟಿಯವರು ತೀರ್ಮಾನ ಮಾಡುತ್ತಾರೋ ಆ ಕಾಮಗಾರಿಗಳನ್ನು ಸರ್ಕಾರದಿಂದ ಮಂಜೂರಾದಂತೆ ಭಾವಿಸಿ ಆ ತೀರ್ಮಾನವಾದ ಮರುದಿನವೇ ಅವುಗಳನ್ನು ಪ್ರಾರಂಭ ಮಾಡುವಂತೆ ಅಧಿಕಾರಿಗಳಿಗೆ ತಿಳಿಸಲಾಗುತ್ತದೆಯೆ ?

ಶ್ರೀ ಜೆ. ಆರ್. ಹಾಲಸ್ವಾಮಿ (ಜಗಳೂರು).—ನಮ್ಮಲ್ಲಿ 8 ಸಾವಿರ ಪಂಪ್‌ಸೆಟ್‌ಗಳನ್ನು ಸಪ್ಲೈ ಮಾಡುವುದಕ್ಕೆ ಮಂಜೂರಾಗಿದ್ದರೂ ಅದೀಗ 3 ಸಾವಿರಕ್ಕೆ ಇಳಿದಿದೆ. ಕಾರಣ ಪೈಪುಗಳಿಲ್ಲ ಎಂದು ಹೇಳುತ್ತಿದ್ದಾರೆ. ಅದರೆ ಯಾವ ಕಡೆ ಜನರು ಮರದ ಪೈಪುಗಳನ್ನು ಫಿಕ್ಸ್‌ಮಾಡುವುದಕ್ಕೆ ಒಪ್ಪಿ ಅವುಗಳನ್ನು ಸಪ್ಲೆ ಮಾಡುತ್ತಾರೋ ಅಂಥ ಕಡೆಗಳಲ್ಲಿ ಅವುಗಳನ್ನು ಹಾಕುವುದಕ್ಕೆ ಅವಕಾಶ ಕೊಡಲಾಗುವುದೇ ಮತ್ತು ಹಾಲಿ ಸರಬರಾಯಿ ಅಗತಕ್ಕ ಆಹಾರ ಸಾಮಗ್ರಿಗಳಲ್ಲಿ ಆ 700 ಟನ್‌ಗಳು ಏತಕ್ಕೂ ಸಾಕಾಗುವುದಿಲ್ಲ. ಅದನ್ನು ಇನ್ನೂ 4-5 ನೂರು ಟನ್‌ಗಳಿಗೆ ಅದನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲವೇ ?

Sri TIRUMALA DEVARAYA (Gangavati).—Sir, there is a wrong opinion among the officers that the whole of the Gangavati taluk is in Ayakat area. Only 40 villages are in Ayakat area and 80 villages are in non-Ayakat area. There is no problem of employment and food so far as the 40 villages which are in Ayakat area, are concerned. But since the people are migrating from non-Ayakat area to the Ayakat area, the greatest difficulty of the Ayakat area is that prices have gone up. Therefore, I request that Government should supply adequate foodgrains at a reasonable price. Secondly, the collection of arrears of land revenue should not be forced in the Ayakat area also; because of the failure of rain and short of natural water supply there will be difficulties in production also.

ಶ್ರೀ ದೊಡ್ಡಬೋರೇಗೌಡ.—ಖಾಯಂ ಪರಿಹಾರಗಳನ್ನು ಒದಗಿಸತಕ್ಕ ಮಾರ್ಗದಲ್ಲಿ ಇರಿಗೇಷನ್ ಬಾವಿಗಳನ್ನು ಇನ್ನೂ ಆಳಪಡಿಸಿ ಲಿಫ್ಟ್ ಇರಿಗೇಷನ್ನಿಗೆ ಹೆಚ್ಚಿನ ರೀತಿಯಲ್ಲಿ ಗ್ರಾಮಾಂತರ ಪ್ರದೇಶದ ಜನರಿಗೆ ಸಹಾಯ ಮಾಡಲು ಅಲ್ಲಿ ಹೆಚ್ಚಿನ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆಯೇ ?

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈ ದಿವಸ ಎಲ್ಲ ಕಡೆಗಳಲ್ಲಿ ಕೂಲಿಗಳಿಗೆ ನ್ಯಾಯವಾದ ಕೂಲಿ ದೊರೆಯುತ್ತಿಲ್ಲ. ಬಹಳ ಮಟ್ಟಿಗೆ ಹಣ ಮಧ್ಯವರ್ತಿಜನರ ಕೈಸೇರುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಕ್ರಮಗಳನ್ನು ಕೈಗೊಳ್ಳುವುದು, ಇನ್ನು ತಾತ್ಕಾಲಿಕ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಬಾವಿಗಳ ಕೆಲಸವನ್ನು ಹೆಚ್ಚಿಗೆ ತೆಗೆದುಕೊಂಡು ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಿ ಅದರಲ್ಲೂ ಕೋಲಾರ ಜಿಲ್ಲೆಯಲ್ಲಿ ಬಾವಿ ನೀರಿಗೂ ಅಭಾವ ಇರುವುದರಿಂದ ಅಲ್ಲಿ ಆ ಶ್ರೀನಿವಾಸಪುರದ ತಾಲ್ಲೂಕಿಗೆ ಹೆಚ್ಚಿನಮಟ್ಟದಲ್ಲಿ ಬಾವಿಗಳನ್ನು ತೋಡಿಸಿ ಅವುಗಳಿಗೆ ಪಂಪ್‌ಸೆಟ್‌ಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ಬಸವರಾಜ್ (ಕೃಷ್ಣರಾಜಪೇಟೆ).—ಆಹಾರದ ಧಾನ್ಯಗಳ ಬೆಲೆ ಒಂದು ನಿಗದಿಯಾದ ಮಟ್ಟಕ್ಕೆ ಮೀರಿ ಏರದಂತೆ ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಮತ್ತು ಸ್ಕೇರ್ಸಿಟಿ ಪ್ರದೇಶಗಳಿಗೆ ಹಣವನ್ನು ಒದಗಿಸತಕ್ಕ ಕಾರ್ಯದಲ್ಲಿ ಸರ್ಕಾರದವರು ಒಂದು ಮಿತಿಯನ್ನು ಹಾಕತಕ್ಕದ್ದು ಸೂಕ್ತವಲ್ಲವೇ ?

Sri S. S. SHETTAR.—The Hon'ble Chief Minister has made it clear that the Central Study Team has properly assessed the position of our State and it is said that our State has not properly utilised 2.50 crores. But now that the Hon'ble Chief Minister has made a demand for 20 crores of rupees, how can he reconcile these two statements ?

ಶ್ರೀ ಟಿ. ಆರ್. ಶ್ಯಾಮಣ್ಣ.– ಬೆಂಗಳೂರು ನಗರಕ್ಕೆ ಇನ್ನು ಕೇವಲ 70 ದಿವಸಗಳಿಗೆ ಆಗುವಷ್ಟು ಮಾತ್ರ ನೀರು ಇರುತ್ತದೆಂದು ಕೇಳಿಬರುತ್ತಿದೆ. ಅದಕ್ಕಾಗಿ ನಗರಕ್ಕೆ ಬೇಕಾಗತಕ್ಕ ನೀರನ್ನು ಸರಬರಾಯಿ ಮಾಡಲು ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಸೂಚನೆಗಳನ್ನೇನಾದರೂ ಕೊಟ್ಟಿದ್ದಾರೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ).—ಮುಖ್ಯಮಂತ್ರಿಗಳು ಉತ್ತರ ಕರ್ಣಾಟಕದಲ್ಲಿ ಇತ್ತೀಚೆಗೆ ಮಳೆ ಆಗಿದೆ ಎಂದು ಹೇಳಿದ್ದರೂ ಆ ಮುಂಗಾರು ಅಕಾಲಕ್ಕೆ ಬಂದ ಕಾರಣ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಈ ಹಂಗಾಮಿ ಅನುಕೂಲಗಳನ್ನು ಅಲ್ಲಿಗೂ ಮುಂದುವರಿಸಲಾಗುತ್ತದೆಯೇ ?

ಶ್ರೀ ಆರ್. ಧನಂಜಯ (ರಾಮನಗರ).—ಈಗ ಡಿಸ್ಟ್ರೆಸ್ಡ್ ಏರಿಯಾದಲ್ಲಿ ಕೊಡಲಾಗುತ್ತಿರುವ ಕೂಲಿ ದರಗಳು ಪಿ.ಡಬ್ಲ್ಯು.ಡಿ. ದರಗಳೇ ? ಈಗ ಒಂದು ರೂಪಾಯಿ ಮೂವತ್ತೈದು ಪೈಸೆಗಳನ್ನು ಕೊಡಲಾಗುತ್ತಿದೆ, ಇದನ್ನು ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಪರ್ಮನೆಂಟ್ ರಿಲೀಫ್ ಕಾಮಗಾರಿಗಳ ಬಗ್ಗೆ ಖರ್ಚುಮಾಡಬೇಕೆಂದಿರುವ 20 ಕೋಟಿ ರೂಪಾಯಿಗಳಲ್ಲಿ, ಕಾವೇರಿ ಬೇಸಿನ್‌ನಲ್ಲಿ ಎಷ್ಟು ಹಣವನ್ನು ಖರ್ಚುಮಾಡಲಾಗುತ್ತದೆ ?

ಶ್ರೀಮತಿ ಚಂಪಾಬಾಯಿ ಬೋಗಳೆ (ಕಾಗವಾಡ).–ಹೊಳೆ ದಂಡೆಗಳು ಇರತಕ್ಕ ಎಲ್ಲ ಕಡೆಗಳಲ್ಲೂ ಪಂಪ್‌ಸೆಟ್ಟುಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ತೆ. ಎಚ್. ಪಾಟೀಲ್.—ನಮ್ಮ ಗದಿಗಿನಲ್ಲಿ ನೀರನ್ನು ಸಪ್ಲೆ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಈಗ 20 ಸಾವಿರ ಪಂಪ್‌ಸೆಟ್ಟುಗಳನ್ನು ಬ್ಯಾಂಕು ಮೂಲಕ ಒದಗಿಸುವುದಾಗಿ ಹೇಳಲಾಗಿದೆ. ಅದನ್ನು ಯಾವ ಆಧಾರದ ಮೇಲೆ ತಾಲ್ಲೂಕುಗಳಿಗೆ ಹಂಚಲಾಗುತ್ತದೆ? ಹಿಂದೆ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಪಂಪ್‌ಸೆಟ್ಟುಗಳನ್ನು ಕೊಟ್ಟಿದೆ ಎಂಬುದನ್ನು ನೋಡಿ ಕೊಡಲಾಗುತ್ತದೆಯೇ ಅಥವಾ ಹೊಸ ನೀತಿಯನ್ನು ಅನುಸರಿಸಿ ಕೊಡಲಾಗುತ್ತದೆಯೇ? ಅಥವಾ ಅಲ್ಲಿ ಎಷ್ಟು ಹೊಸ ಹೊಸ ಬಾವಿಗಳನ್ನು ತೆಗೆಸಲಾಗಿದೆ ಎನ್ನುವುದರ ಆಧಾರದ ಮೇಲೆ ಕೊಡಲಾಗುತ್ತದೆಯೇ ? ಈ ದಿವಸ ಕೋಲಾರ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿಯ ಬಗ್ಗೆ ವೆಚ್ಚಮಾಡತಕ್ಕ ಹಣದಲ್ಲಿ ಬಹು ಭಾಗ ಮಧ್ಯವರ್ತಿ ಜನರ ಕೈಗೆ ಹೋಗುತ್ತಿದೆ. ಅದನ್ನು ತಪ್ಪಿಸುವುದಕ್ಕೇನು ಮಾರ್ಗವನ್ನು ಕೈಗೊಳ್ಳುತ್ತಾರೆ ?

Smt.. WINNIFRED F. FERNANDES (Coondapur).—Just now the hon. Chief Minister said that there is buffer stock of foodgrains. But now the Goverment has given only half kilo of Milo in places like Coondapur. In that case, what is the use of this buffer stock ? Is it meant to be stocked or to be distributed ?

Sri B. B. SAYANAK (Belgaum).—May I ask the Chief Minister whether the Government is going to withdraw all the levy cases pending in the Court of Belgaum taking into consideration the drought condition in Belgaum Taluk ?

ಶ್ರೀ ಎಸ್. ಶ್ರೀಕಂಠಯ್ಯ.—ಈ ಅಭಾವ ಪರಿಸ್ಥಿತಿಯನ್ನು ಸುಧಾರಿಸಲು ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಒಬ್ಬ ವಿಶೇಷ ಅಧಿಕಾರಿಗಳನ್ನು ನೇಮಿಸಿರತಕ್ಕದ್ದು ಸ್ವಾಗತಾರ್ಹವಾಗಿದೆ. ಅವರು ನೇರವಾಗಿ ಸರ್ಕಾರದವರಿಗೆ ಜವಾಬ್ದಾರರಾಗಿರುವುದರಿಂದ, ಈ ಸಭೆಯ ಜವಾಬ್ದಾರಿಯನ್ನು ನಿರ್ವಹಿಸಿರತಕ್ಕ ಒಬ್ಬ ಮಂತ್ರಿಗಳಿಗೆ ಪೂರ್ತಿಯಾಗಿ ಈ ಖಾತೆಯನ್ನು ವಹಿಸಿ ಅವರಿಂದ ಈ ಸಭೆಗೆ ಒಂದು ವರದಿಯನ್ನು ಕೊಡಿಸಿಕೊಡುತ್ತೀರಾ ?

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಈಗ ರಿಲೀಫ್ ಕಾಂಗಾರಿಗೆ ಕೊಡತಕ್ಕ ಕೂಲಿ ಒಂದು ರೂಪಾಯಿ 31 ಪೈಸೆ ಬಹಳ ಕಡಿಮೆ. ಇದರಲ್ಲಿ 10 ಪರ್ಸೆಂಟ್ ಸೇವಿಂಗ್ಸ್ ತೋರಿಸಬೇಕೆಂದು ಕಡ್ಡಾಯವಾದ ಕಾನೂನು ಇದೆ, ಇದನ್ನು ತಪ್ಪಿಸುತ್ತೀರಾ ಅಥವಾ ಮುಂದುವರಿಸುತ್ತೀರಾ ?

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಡ್ರಾಟ್ ಕಂಡೀಷನನ್ನು ಎದುರಿಸಬೇಕಾದರೆ ಕೋ-ಆಪರೇಷನ್, ಅಂಡರ್‌ಸ್ಟ್ಯಾಂಡಿಂಗ್, ಕೋ-ಆರ್ಡಿನೇಷನ್ ಇರಬೇಕು, ಅದಕ್ಕೆ ತಕ್ಕಂತೆ ರೆಸಿಪ್ರೋಸಿಟಿ ಇರಬೇಕು. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಕ್ಯಾಬಿನೆಟ್ ಎಕ್ಸ್‌ಪ್ಯಾನ್‌ಷನ್ ಮಾಡದೇ ಇದ್ದುದರಲ್ಲೇ ಕೆಲಸ ಮಾಡಬೇಕೆಂಬ ಒಂದು ಸಲಹೆ ಕೂಡ ಇದೆ. ಲ್ಯಾಂಡ್ ರೆವಿನ್ಯೂ ವಸೂಲು ಮಾಡಬೇಡಿ ಅಂತ ಡೆಪ್ಯೂಟಿ ಕಮಿಷನರಿಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳುತ್ತಾ ಇದ್ದೀರಿ. ಅಧಿಕಾರ ದುರುಪಯೋಗವಾಗುತ್ತಾ ಇದೆ. ಆ ರೀತಿ ವಸೂಲು ಮಾಡದಂತೆ ನೋಡಿಕೊಳ್ಳುವುದಕ್ಕೆ ಏನು ಉಪಾಯ ಮಾಡುತ್ತೀರಿ ?

ಶ್ರೀ ಎನ್. ಲೋಕಯ್ಯನಾಯಕ್ (ವಿರಾಜಪೇಟೆ).—ಜಿಲ್ಲಾಧಿಕಾರಿಗಳಿಗೆ ಆದೇಶ ಕಳುಹಿಸಿದ್ದೇವೆ ಎಂದು ಹೇಳುತ್ತಾ ಇದ್ದೀರಿ, ಇದುವರೆಗೂ ರೆವಿನ್ಯೂ ಅಧಿಕಾರಿಗಳು ಪ್ರತಿ ಗ್ರಾಮದಲ್ಲೂ ಹೋಗಿ ರೈತರ ಚರ ಸ್ವತ್ತುಗಳನ್ನು ಹರಾಜು ಮಾಡುತ್ತಾ ಇದ್ದಾರೆ ಇದಕ್ಕೆ ಏನು ಕ್ಲಾರಿಫಿಕೇಷನ್ ಕೊಡುತ್ತೀರಿ ?

ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ಹತ್ತುಸಾವಿರ ಟನ್ ಆದರೂ ಆಹಾರಧಾನ್ಯಗಳನ್ನು ಒಂದು ತಿಂಗಳಿಗೆ ಕೊಡದಿದ್ದರೆ ಈ ಅಭಾವ ಹೋಗುವುದಿಲ್ಲ, ಅದನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ಈಗಾಗಲೇ ಮೈಸೂರು ರಾಜ್ಯದಲ್ಲಿ ಸಾಧಾರಣ 3000 ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ ಎಂದು ಸ್ಪಂತವಾಗಿ ಒಪ್ಪಿಕೊಂಡಿದ್ದೀರಿ. ಪ್ರಥಮವಾಗಿ ಮೊದಲನೆಯ ಕ್ರಮ ಎಲ್ಲಾ ಹಳ್ಳಿಗಳಿಗೂ ಕೂಡ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸಿದ್ಧರಾಗಿದ್ದೀರಾ ? ಎರಡನೆಯದು ಶಿವಮೊಗ್ಗಾ ಮುಂತಾದ ಕಡೆಗಳಲ್ಲಿ ಲೆವಿ ಕೇಸು ಹಾಕಿದ್ದಾರೆ, ಇಂತಹ ಪರಿಸ್ಥಿತಿಯಲ್ಲಿ ಅದನ್ನು ಮುಂದುವರಿಸದೆ ವಿಥ್‌ಡ್ರಾ ಮಾಡಲು ಸಾಧ್ಯವಿಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಸೂಚನೆ ಏನೆಂದರೆ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಈಗ ರಿಲೀಫ್ ಕಮಿಟಿಗಳನ್ನು ಮಾಡಲಾಗಿದೆ, ಅದರಲ್ಲಿ ಬರೀ ಅಧಿಕಾರಿಗಳು ಇದ್ದಾರೆ, ಚುನಾಯಿತ ಪ್ರತಿನಿಧಿಗಳು ಇಲ್ಲ. ಆದ್ದರಿಂದ ರಾಜಕೀಯ ಪ್ರತಿನಿಧಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಬೇಕು, ಅವರೆಲ್ಲರೂ ಸೇರಿ ಇದಕ್ಕೆ ಸಹಾಯ ಮಾಡಬೇಕು ಎಂಬುದು ಒಂದು ಸೂಚನೆ. ಎರಡನೆಯದು ತಾವು 20 ಕೋಟಿ ರೂಪಾಯಿಗಳನ್ನು ಕೇಳುವುದಕ್ಕೆ ಹೊರಟಿದ್ದೀರಿ, ಅದು ಸಾಲದು, 40 ಕೋಟಿ ರೂಪಾಯಿಗಳಿಗಾದರೂ ಅದನ್ನು ಹೆಚ್ಚು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಎಸ್ ಅರಕೇರಿ (ಬಳ್ಳೊಳ್ಳಿ).—ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕೆಂದು ಹೇಳಿದ್ದೀರಿ. ಬಿಜಾಪುರ ಬರಗಾಲಕ್ಕೆ ತುತ್ತಾಗಿ ಅಲ್ಲಿ ಗಂಭೀರ ಪರಿಸ್ಥಿತಿ ಉಂಟಾಗಿದೆ. ಅಲ್ಲಿ ಆಲಮಟ್ಟಿ ಯೋಜನೆಯನ್ನು ಯಾವಾಗ ತೆಗೆದುಕೊಳ್ಳುತ್ತೀರಿ ? ಮತ್ತು ಬಿಜಾಪುರ ಪಟ್ಟಣದ ಜನಸಂಖ್ಯೆ ಒಂದೂವರೆ ಲಕ್ಷ ಇದ್ದು ನೀರಿನ ಅಭಾವ ದಿನೇ ದಿನೇ ಹೆಚ್ಚುತ್ತಾ ಇದೆ. ಈ ನೀರಿನ ಸೌಕರ್ಯವನ್ನು ಪರಿಹರಿಸಲು ಏನು ಯೋಜನೆ ಕೈಕೊಳ್ಳುತ್ತೀರಿ ? ಇಂಡಿ ತಾಲ್ಲೂಕಿನಲ್ಲಿ 8 ಸಾವಿರ ಬಾವಿಗಳ ಪೈಕಿ ಒಂದು ಬಾವಿಗೂ ಪಂಪ್ ಹಾಕಿಸಿಕೊಟ್ಟಿಲ್ಲ ಅದಕ್ಕೆ ಏನು ಯೋಜನೆ ಕೈಗೊಳ್ಳುತ್ತೀರಿ ಎಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಚಿಕ್ಕೇಗೌಡ.—ಏನು ಮಾಡಬೇಕು ಎಂಬುದನ್ನು ದಿಟ್ಟತನದಿಂದ ಮಾಡುತ್ತಾರೆ ಅದರ ವಿಷಯದಲ್ಲಿ ಯೋಚನೆ ಮಾಡಬೇಕಾಗಿಲ್ಲ. ನಮ್ಮ ತಾಲ್ಲೂಕಿನಲ್ಲಿ ಬಾವಿಗಳಿಗೆ ಪಂಪ್ ಸೆಟ್ಸ್ ಹಾಕಿಸಿಕೊಟ್ಟು ನೀರಾವರಿ ಯೋಜನೆಗೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ.—ತಾವು ಅನೇಕ ಸೂಚನೆಗಳನ್ನು ಕೊಟ್ಟಿದ್ದೀರಿ, ಜಿಲ್ಲಾಮಟ್ಟದ ಅಧಿಕಾರಿಗಳನ್ನು ಕೇಳಿದರೆ ರಿಟನ್ ಆರ್ಡರ್ಸ್ ಬಂದಿಲ್ಲ ಎಂದು ಹೇಳುತ್ತಾರೆ. 7,000 ಹಳ್ಳಿಗಳಲ್ಲಿ ಕಂದಾಯದ ರೆವಿಷನ್ ಮಾಡಿದ್ದಾರೆ ಅದೆಲ್ಲಾ ಬಹುಭಾಗ ಉತ್ತರ ಕರ್ನಾಟಕಕ್ಕೆ ಸೇರಿದೆ. ಹಳೇ ಮೈಸೂರಿನ ಭಾಗಗಳಿಗೆ ಕಂದಾಯದ ಒತ್ತಾಯ ಜಾಸ್ತಿಯಾಗಿದೆ, ರೆವಿಷನ್ ಕೊಟ್ಟಿಲ್ಲ ಈ ಬಗ್ಗೆ ಏನು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೀರೆಂಬುದನ್ನು ತಿಳಿಸುತ್ತೀರಾ ?

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಈ ಕ್ಷಾಮ ಕಾಲವನ್ನು ದುರುಪಯೋಗಪಡಿಸಿ ಕೊಂಡು ವ್ಯಾಪಾರಸ್ಥರು ಧಾರಣೆಗಳನ್ನು ಏರಿಸುತ್ತಾ ಇದ್ದಾರೆ ಅದನ್ನು ತಡೆಗಟ್ಟುವುದಕ್ಕೆ ಕಾರ್ಯ ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ನಂಜನಗೂಡು, ಚಾಮರಾಜನಗರ ಸಬ್‌ಡಿವಿಜನ್‌ನಲ್ಲಿ ಕ್ರಿಶ್ಚಿಯನ್ ಮಿಷಿನರಿಗಳು ಅಮೇರಿಕದ ಗೋಧಿ, ಎಣ್ಣೆ ಪದಾರ್ಥಗಳನ್ನು ಹಂಚಿ ಈ ಕ್ಷಾಮ ಪರಿಸ್ಥಿತಿಯಲ್ಲಿ ಜನರನ್ನು ಹಿಂದೂ ಧರ್ಮದಿಂದ ಕನ್ವರ್ಟ್ ಮಾಡುವುದಕ್ಕೆ ಹೊರಟಿದ್ದಾರೆ ಅದನ್ನು ತಪ್ಪಿಸಬೇಕು. ಮಂತ್ರಿಗಳು ಬರಗಾಲ ಪ್ರದೇಶದಲ್ಲಿ ಪ್ರವಾಸ ಮಾಡುವಾಗ ಕೇವಲ ಕಾಂಗ್ರೆಸ್‌ನವರ ಮೀಟಿಂಗ್ ನಲ್ಲಿ ಸೇರಿಕೊಂಡು ನಾನ್ ಕಾಂಗ್ರೆಸ್‌ನವರನ್ನು ಕೈಬಿಡುತ್ತಾರೆ, ಅದರ ಬಗ್ಗೆ ಏನು ಕಾರ್ಯಕ್ರಮ. ತೆಗೆದುಕೊಳ್ಳುತ್ತೀರಿ ?

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಇದುವರೆಗೂ ಲೆವಿ ಮೂಲಕ ಆಹಾರ ಪದಾರ್ಥಗಳನ್ನು ಸಂಗ್ರಹ ಮಾಡಿದ್ದೀರಿ, ಕ್ವಿಂಟಾಲಿಗೆ 55 ರೂಪಾಯಿನಂತೆ ತೆಗೆದುಕೊಂಡು 75 ರೂಪಾಯಿನಂತೆ ಮಾರಾಟ ಮಾಡಿಕೊಂಡು ಬಂದಿದ್ದೀರಿ. ಅನಾವಶ್ಯಕವಾಗಿ ಹಾಕಿರತಕ್ಕ ಅಡ್ಮಿನಿಸ್ಟ್ರೇಟಿವ್ ಚಾರ್ಜಸ್‌ನ್ನು ತೆಗೆದುಹಾಕಿ ಯಾವ ಬೆಲೆಗೆ ತೆಗೆದುಕೊಂಡಿದ್ದೀರೋ ಅದೇ ಬೆಲೆಗೆ ಮಾರಬೇಕು ಮತ್ತು ಅಪ್ಪರ್ ಕೃಷ್ಣಾ ಬಲದಂಡೆ ಕಾಲುವೆ, ರಾಯಚೂರು, ದೇವದುರ್ಗ, ಲಿಂಗಸೂಗೂರು ತಾಲ್ಲೂಕು ಆಹಾರ ಪದಾರ್ಥಗಳನ್ನು ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಹಂಜಿ ಶಿವಣ್ಣ (ತರೀಕೆರಿ).—ಪರಿಹಾರ ಕಾರ್ಯಗಳಿಗಾಗಿ ಒದಗಿಸುವ ಹಣ ಮತ್ತು ಆಹಾರ ಹಂಚಿಕೆ ಸಂಬಂಧದಲ್ಲಿ ಏನಾದರೂ ದುರುಪಯೋಗವಾದರೆ ಸಂಬಂಧಪಟ್ಟವರಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವ ಬಗ್ಗೆ ಭರವಸೆ ಕೊಡುತ್ತೀರಾ ? ಕಂದಾಯದ ವಿಷಯದಲ್ಲಿ ಕ್ಯಾಬಿನೆಟ್ಟಿನಲ್ಲಿ ಚರ್ಚೆಮಾಡಿ 5 ಸಾವಿರ ಹಳ್ಳಿಗಳ ಕಂದಾಯ ವಸೂಲಿ ಮುಂದುವರೆಸುವಂತೆ ತೀರ್ಮಾನವಾಗಿದೆ ಎಂದು ತಿಳಿದುಬಂದಿದೆ. ಹಾಗೆ ಮಾಡುವುದಾದರೆ ಯಾವ ಪ್ರದೇಶದಲ್ಲಿ ಎಂಬದನ್ನು ಹೇಳಬೇಕು.

ಶ್ರೀ ಬಿ. ಪಿ. ಗಂಗಾಧರ.—ತುಮಕೂರು ಜಿಲ್ಲೆಯಲ್ಲಿ ಸಾಮಾನ್ಯವಾಗಿ ಅನೇಕರು ಎಲ್ಲ ಹಳ್ಳಿಗಳವರೂ ಸೇಕಡ ಸುಮಾರು 25 ರಿಂದ 60-70 ರವರೆಗೂ ಪಕ್ಕದ ಪ್ರಾಂತಗಳಾದ ಆಂಧ್ರ ಮುಂತಾದ ರಾಜ್ಯಗಳ ಕಡೆಗಳಿಗೆ ಹೋಗಿದ್ದಾರೆ. ಕಾರಣ ನೀವು ಮಾಡುವ ರಿಲೀಫ್ ಕಾಮಗಾರಿ ಕೆಲಸಗಳು ಒಂದೆರಡು ದಿನಗಳಲ್ಲಿ ಮುಗಿದುಹೋಗುವುದು, ಕಂಟಿನ್ಯೂಯಸ್ಸಾಗಿ ಕೆಲಸ ಕೊಡುವುದಿಲ್ಲ ಎಂದು ಈ ದಿವಸ ಏನೋ ಒಂದು ಕೆಲಸ ಕೊಡುವುದು ನಾಳೆ ಅಥವಾ ನಾಡಿದ್ದು ಆ ಕೆಲಸ ಮುಗಿಯಿತು ಎಂದು ಹೇಳುವುದುಂಟು. ಒಂದು ಕೆಲಸ ಮುಗಿದಮೇಲೆ ಪುನಃ 15 ದಿವಸ ಬೇರೆ ಕೆಲಸ ದೊರೆಯುವುದಿಲ್ಲ. ಆದುದರಿಂದ ಒಂದೇ ಸಮನಾಗಿ ಮಧ್ಯೆ ನಿಲ್ಲದಂತೆ ಕೆಲಸ ಸಿಕ್ಕುವಂತೆ ಏರ್ಪಾಡುಮಾಡುತ್ತೀರಾ ? ಮತ್ತು ಕೂಲಿಗಾರರಿಗೆ ಹಣಕ್ಕೆ ಬದಲಾಗಿ ಧಾನ್ಯ ಕೊಟ್ಟರೆ ಒಳ್ಳೆಯದಲ್ಲವೇ ?

**Sri D. B. KALMANKAR.**—You have said that there is a buffer stock of wheat about 30,000 tons and 15,000 tons milo but you have not said about jawar. How many thousand tons of jawar is in stock ? At what rate you are going to give this jawar in affected areas and for how long that may be used to effectively slove the scarcity conditions in the affected areas ?

ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪು).—ನದಿಗಳ ನೆರೆ ಹಾವಳಿಗೆ ತುತ್ತಾದ ಇತರ ರಾಜ್ಯಗಳಿಗೆ ಕೇಂದ್ರ ಸರಕಾರದಿಂದ ಮಾತ್ರವಲ್ಲದೆ ಪ್ರಧಾನಮಂತ್ರಿಗಳ ಫ್ಲಡ್‌ರಿಲೀಫ್ ಫಂಡಿನಿಂದಲೂ ಹಣಸಿಕ್ಕಿದೆ. ತಾವೇನಾದರೂ ಪ್ರಧಾನಮಂತ್ರಿಗಳ ಫ್ಲಡ್ ರಿಲೀಫ್ ಫಂಡಿನಿಂದ ಹಣ ಕೊಡಬೇಕೆಂದು ಕೇಳಿದ್ದೀರಾ? ಅದರಲ್ಲಿ ತಮಗೇನಾದರೂ ಪಾಲು ದೊರೆತಿದೆಯೋ ? ದೊರೆತಿದ್ದರೆ ಎಷ್ಟು ದೊರೆತಿದೆ ? ಇದುವರೆಗೆ ಕಾಣದಂಥ ನೆರೆಹಾವಳಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈಗ ಕಂಡು ಭೀಕರ ಪರಿಸ್ಥಿತಿ ಬಂದು 12 ಜನರು ಕೊಚ್ಚಿ

ಕೊಂಡು ಹೋಗಿದ್ದಾರೆ. ಮತ್ತು ಒಂದನೆಯ ಬೆಳೆಯ ಬತ್ತದ ಪೈರು ಸಾವಿರಾರು ಎಕರೆಯಲ್ಲಿ ಹಾಳಾಗಿದೆ. ಆ ಹಾನಿಗೊಳಗಾದವರಿಗೆ ಕಂದಾಯ ಮತ್ತು ಲೆವಿ ಮಾಫಿಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಿಲೀಫ್ ಕೆಲಸಮಾಡಲು ಕೆಲವು ಕಡೆ ತಾಲ್ಲೂಕು ಬೋರ್ಡು, ಮತ್ತೆ ಕೆಲವು ಕಡೆ ತಾಸೀಲ್ದಾರರನ್ನು ಏಜೆನ್ಸಿಯಾಗಿ ಮಾಡಲಾಗಿದೆ. ಅದರ ಜೊತೆಗೆ ಪಿ.ಡಬ್ಲ್ಯೂಡಿ. ಯವರು ಕೂಡ ಕೆಲಸ ಮಾಡಬೇಕು. ಎರಡನೆಯದಾಗಿ ಎನ್. ಇ. ಎಸ್. ಜೀಪನ್ನು ಉಪಯೋಗಿಸಲು ತೊಂದರೆಯಾಗಿದೆ. ಆಗಾಗ್ಯೆ ರಿಲೀಫ್ ಕಮಿಟಿಯವರು ಹೋಗಿ ನೋಡಿಕೊಂಡು ಬರುವುದಕ್ಕೆ ಎನ್. ಇ. ಎಸ್. ಜೀಪನ್ನು ಉಪಯೋಗಿಸಲು ಅವಕಾಶ ಮಾಡಬೇಕು. ಮೂರನೆಯದಾಗಿ ಹಳೆಯ ಮೈಸೂರಿನಲ್ಲಿ 65–66 ರಿಂದ 3 ವರ್ಷ ಕ್ಷಾಮವಿರುವ ಕಡೆ ಲ್ಯಾಂಡ್ ರೆವಿನ್ಯೂ ರೆಮಿಷನ್ ಕೊಡಬೇಕು. ನಾಲ್ಕನೇಯದಾಗಿ ವಿಜಿಲೆನ್ಸ್ ಕಮಿಷನ್‌ಗೆ ದೂರು ಬಂದಕೂಡಲೇ ಹೋಗಿ ನೋಡುವುದಕ್ಕೆ ಹೆಚ್ಚು ಸಿಬ್ಬಂದಿ ತೆಗೆದುಕೊಂಡು ಪತ್ತೆಮಾಡಿ ತಪ್ಪುಮಾಡಿದ ಅಧಿಕಾರಿಗಳಿಗೆ ಶಿಕ್ಷೆಮಾಡಲು ವ್ಯವಸ್ಥೆ ಮಾಡಬೇಕು. ಐದನೆಯದಾಗಿ ಆಹಾರವನ್ನು ಉಚಿತವಾಗಿ ಹಂಚುವಾಗ ಇದುವರೆಗೆ ಯಾವ ಪ್ರಕಾರ ಸೊಸೈಟಿ, ಪಂಚಾಯಿತಿ ಮತ್ತು ಆಹಾರ ಡಿಪೋಗಳ ಮೂಲಕ ಹಂಚುತ್ತಿದ್ದೀರೋ ಅದೇ ರೀತಿಯಲ್ಲಿ ಹಂಚಲು ವ್ಯವಸ್ಥೆಮಾಡಬೇಕು, ಇದಕ್ಕೆ ಬೇರೆ ವ್ಯವಸ್ಥೆಮಾಡಬಾರದು.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಬಜೆಟ್ಟಿನಲ್ಲಿಲ್ಲದಿರುವ ಕೆಲಸಮಾಡಲು ಚೀಫ್ ಎಂಜಿನಿಯರಿಗೆ 2 ಕೋಟಿ ರೂಪಾಯಿಗಳ ವರೆಗೂ ಅಂದಾಜುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಕೊಡುವುದಾಗಿ ಭಾಷಣದಲ್ಲಿ ಹೇಳಲಾಗಿದೆ. ಮತ್ತೆ ಮೂರುವರೆ ಕೋಟಿ ರೂಪಾಯಿಗಳನ್ನು ಮೈನರ್ ಇರಿಗೇಷನ್ನಿಗೆ ಇಡಲಾಗಿದೆಯೆಂದು ಹೇಳಲಾಗಿದೆ. ಕಳೆದ ವರ್ಷ ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿದ್ದ ಮಹಿಳಾ ಮಂತ್ರಿಗಳು ಹಾಸನ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಅಲ್ಲಿಗೆ ಒಂದು ಲಿಫ್ಟ್ ಇರಿಗೇಶನ್ ಸ್ಕೀಂ ಮಾಡಿ 3–4 ತಿಂಗಳುಗಳಲ್ಲೇ ಕಾರ್ಯಗತ ಮಾಡುವುದಾಗಿ ಹೇಳಿದ್ದ ಯೋಜನೆ ಇನ್ನೂ ಯೋಜನೆಯಾಗೇ ಉಳಿದಿದೆ. ಇದನ್ನು ಹತ್ತಾರು ಸಾರಿ ಈ ಸಭೆಯಲ್ಲಿ ಹೇಳಲಾಗಿದೆ. ಇಂಥ ಯೋಜನೆಗಳಿಗೆ 150 ಲಕ್ಷ ಮತ್ತು 2 ಕೋಟಿ ಖರ್ಚು ಮಾಡಿ ಕಾರ್ಯಗತಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಅಜೀಜ್‌ಸೇಠ್ (ನರಸಿಂಹರಾಜ).—ಕ್ಷಾಮ ಇರುವಾಗ ಮೈಸೂರಿನಲ್ಲಿ ದಸರಾ ಆಚರಿಸುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಆಹಾರ ಮಂತ್ರಿಗಳು ಮೈಸೂರಿಗೆ ಬಂದಾಗ ದಸರಾ ಹಬ್ಬ ಆಚರಿಸಬಹುದು ಆಹಾರ ಪದಾರ್ಥ ಬೇಕಾದ್ದನ್ನು ಸರಬರಾಯಿ ಮಾಡುತ್ತೇವೆ ಎಂದು ಹೇಳಿದರು. ಈ ದಿವಸದವರೆಗೂ ಗೋಧಿ ಬಂದಿಲ್ಲ, ಅದನ್ನು ಕಳಿಸಲು ಏರ್ಪಾಡುಮಾಡಬೇಕು. ಅಲ್ಲಿ ಖರ್ಚುಮಾಡುವುದನ್ನು ಕ್ಷಾಮ ಪ್ರದೇಶಗಳಲ್ಲಿ ಖರ್ಚುಮಾಡಬಹುದು. ಅಭಾವ ಪರಿಸ್ಥಿತಿ ಇರುವಾಗ ದಸರಾ ಆಚರಿಸುವುದು ರಾಜ್ಯಾಂಗಕ್ಕೆ ವಿರೋಧ. ಕಾಂಗ್ರೆಸ್‌ಸದಸ್ಯರೇ ದಸರಾಕ್ಕೆ ಸಂಬಂಧಪಟ್ಟ ಎಗ್ಸಿಬಿಷನ್ ಸಮಿತಿಯಲ್ಲಿರುವುದರಿಂದ ಮೈಸೂರು ಎಗ್ಸಿಬಿಷನ್ನನ್ನು ಏಕೆ ಕಾಂಗ್ರೆಸ್ ಎಗ್ಸಿಬಿಷನ್ ಎಂದು ಕರೆಯಬಾರದು ?

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮೆಮೊರ್ಯಾಂಡಂನಲ್ಲಿ ಹೇಳಿದಹಾಗೆ ಸೆಪ್ಟಂಬರ್ ತಿಂಗಳವರೆಗೆ ಕೆಲಸ ಮಾಡಿಸಿದ್ದೀರಿ. ಸರಿಯಾಗಿ ಕೆಲಸ ಮಾಡದಿರುವ ಅಧಿಕಾರಿಗಳು ನಿಮಗೆ ಯಾರೆಂಬುದು ಗೊತ್ತಾಗಿದೆ. ಅವರ ಅಚಾತುರ್ಯದಿಂದ ಹಣ ಖರ್ಚಾಗಿಲ್ಲ. ಅಕ್ಟೋಬರ್ ಕೊನೆಯೊಳಗೆ ಹಣ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಇದಕ್ಕೆ ಸರಿಯಾದ ಏಜೆನ್ಸಿ ನಿಮಗೆ ಯಾವುದಿದೆ? ಕಮೀಷನರು ಇತ್ಯಾದಿ ಅಲ್ಲದೆ ಬೇರೆ ಇದೆಯೇ? ತಾಲ್ಲೂಕು ಬೋರ್ಡಿನವರಿಗೆ ಈ ಪರಿಹಾರ ಕೆಲಸ ವಹಿಸುತ್ತೀರೋ ಇಲ್ಲವೋ ಎಂಬುದನ್ನು ಹೇಳಿಲ್ಲ. ಚುನಾವಣೆ ಮುಂದುವರಿಸಿ ಅದನ್ನೇನಾದರೂ ಸೂಪರ್‌ಸೀಡ್ ಮಾಡುತ್ತೀರೋ ? ಹಂಚಿಕೆಯಲ್ಲಿ ದುರ್ವಿನಿಯೋಗವಾಗುತ್ತಿದೆ ಮತ್ತು ಕೆಲಸಗಾರರಿಗೆ ಕಂಟಿನ್ಯೂಯಸ್ಸಾಗಿ ಕೆಲಸ ಕೊಡಬೇಕು. ಪರಿಹಾರ ಕಾರ್ಯ ಮುಗಿಯುವವರೆಗೆ ಏಕೆ ಕೆಲಸ ಕೊಡಬಾರದು? ಸಣ್ಣಪುಟ್ಟ ಕೆಲಸ ತೆಗೆದುಕೊಂಡು ಮಾಡಿದರೆ 3 ದಿವಸ ಒಂದೊಂದು ಕಡೆ ಮಾಡಿದರೆ ಜನರಿಗೆ ರೋಸಿಹೋಗುತ್ತದೆ, ಜನರಿಗೆ ಕಂಟಿನ್ಯೂಯಸ್ಸಾಗಿ ಕೆಲಸ ಸಿಕ್ಕುತ್ತದೆಂಬ ಭರವಸೆಯಿರುವುದಿಲ್ಲ. ಈ ವಿಷಯದಲ್ಲಿ ತಕ್ಕ ಕ್ರಮ ಕೈಕೊಳ್ಳಬೇಕು.

ಶ್ರೀ ಪಿ. ತಿಮ್ಮಯ್ಯ (ಬಸವನಗುಡಿ).—ಬೆಂಗಳೂರು ಕಾವೇರಿ ನದಿ ನೀರು ಬರದೆ ಇದ್ದರೆ ವಿಧಾನಸೌಧಕ್ಕೆ ನೀರಿರುವುದಿಲ್ಲ, ಬೆಂಗಳೂರಿನ ನಾಗರಿಕರಿಗೂ ಕುಡಿಯಲು ನೀರು ಇರುವುದಿಲ್ಲ. ಅಕ್ಕಪಕ್ಕದಲ್ಲಿರುವ ಹಳ್ಳಿಗಳಲ್ಲಿ ಬೋರ್‌ವೆಲ್ ಹಾಕಿ ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕು. ದೇವಾಲಯಗಳಲ್ಲಿ, ಮಸೀದಿಗಳಲ್ಲಿ, ಚರ್ಚುಗಳಲ್ಲಿ ದೇವರ ಪ್ರಾರ್ಥನೆ ಮಾಡಿದರೆ ಮಳೆ ಬರುತ್ತದೆ.

ಶ್ರೀ ಪಿ. ಆಂಜನಪ್ಪ (ಪಾವಗಡ).—ಪಾವಗಡ ತಾಲ್ಲೂಕು ಬರಗಾಲಕ್ಕೆ ತೌರುಮನೆಯಾಗಿದೆ. ಮೈಸೂರು ರಾಜ್ಯದ ಗಡಿಯಲ್ಲಿದ್ದು ಆಂಧ್ರ ರಾಜ್ಯಕ್ಕೆ ಪಕ್ಕದಲ್ಲಿದೆ. ಅಲ್ಲಿ ಒಂದಂಗುಲ ಮಳೆಯೂ ಆಗುವುದಿಲ್ಲ. ಬಾವಿಗಳಿಗೆ ಮತ್ತು ಪಂಪ್‌ಸೆಟ್‌ಗಳಿಗೆ ಎಸ್ಟಿಮೇಟ್ ಆಗಿರುವ ಕಡೆ ಬೇಗ ಕೆಲಸಗಳಾಗಬೇಕು.

ಬೋರ್‌ವೆಲ್‌ಗಳನ್ನು ಹಾಕಿ ನೀರು ಒದಗಿಸುವುದು.

ಆಹಾರ ಪದಾರ್ಥಗಳನ್ನು ಮೊದಲಿನಿಂದಲೂ ಕಡಮೆ ಕೊಡುತ್ತ ಬಂದಿದ್ದಾರೆ. ಅದನ್ನು ಹೆಚ್ಚು ಮಾಡುವುದಲ್ಲದೆ ಹೆಚ್ಚು ಕೋಟಾ ಕೊಡಬೇಕು.

ದನಕರುಗಳಿಗೆ ಮೇವಿಲ್ಲದೆ ಇರುವುದರಿಂದ ಅದನ್ನು ಕೂಡ ಒದಗಿಸಬೇಕು.

ಪ್ರತಿ ಪಂಚಾಯಿತಿಯಲ್ಲಿಯೂ ಪರಿಹಾರ ಕಾರ್ಯಗಳನ್ನು ತೆಗೆದುಕೊಂಡು, ಮಣ್ಣು ಕೆಲಸ ಮುಂತಾದುವನ್ನು ಮಾಡಿಸಿ ಪ್ರತಿ ದಿವಸ ದುಡ್ಡು ನೇರವಾಗಿ ಬಡವರಿಗೆ ಸಿಕ್ಕುವ ಹಾಗೆ ಅನುಕೂಲ ಮಾಡಿಕೊಡಬೇಕು.

ಶ್ರೀಮತಿ ಲೀಲಾವತಿ ರೈ (ಬಂಟವಾಳ).—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಹಾವಳಿಯಿಂದ ಕಮ್ಯೂನಿಕೇಷನ್‌ಗಳು ಮುರಿದು ಬಿದ್ದು ಎಲ್ಲ ಹಾಳಾಗುತ್ತಿದೆ. ಅದನ್ನು ಸರಿಪಡಿಸುವವರೆಗೆ ಹಳ್ಳಿಗಳಲ್ಲಿ ನೆರೆ ಹಾವಳಿಯಿಂದ ಜನರು ಆಹಾರವಿಲ್ಲದೆ ಕೆಲಸವಿಲ್ಲದೆ ತೊಂದರೆಗೀಡಾಗಿದ್ದಾರೆ. ಇಂಥ ಕಾಮಗಾರಿಗಳನ್ನು ತೆಗೆದುಕೊಂಡರೆ ಜನರಿಗೆ ಕೆಲಸ ಕೊಟ್ಟಂತಾಗುತ್ತದೆ.

ನೆರೆ ಹಾವಳಿಯಿಂದ ಮನೆಗಳು ಬಿದ್ದುಹೋದುದನ್ನು ಲೋಕೋಪಯೋಗಿ ಇಲಾಖೆ ಮುಖಾಂತರ ತಕ್ಷಣ ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳಬೇಕು.

ಮೈನರ್ ಇರಿಗೇಷನ್ ಕೆಲಸಗಳು ತುಂಬ ಪೆಂಡಿಂಗ್ ಇವೆ. ಕಾಯಂ ಕೆಲಸಗಳೆಂದು ಏನು ತೆಗೆದುಕೊಳ್ಳುತ್ತೀರಿ ಅದರಲ್ಲಿ ಈ ಸಾರಿ ಪ್ರತಿಯೊಂದೂ ಒಂದು ಲಕ್ಷದ ಕೆಳಗಡೆ ಆಗುವಂಥ ಮೈನರ್ ಇರಿಗೇಷನ್ ಕೆಲಸಗಳನ್ನು ಹಳ್ಳಿಗಳಲ್ಲಿ ತೆಗೆದುಕೊಂಡರೆ ಅದರಿಂದ ಹೆಚ್ಚು ಆಹಾರ ಬೆಳೆಸುವುದಕ್ಕೆ ರೈತರಿಗೆ ಸಹಾಯವಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಅಭಾವ ಪರಿಸ್ಥಿತಿಯಲ್ಲಿ ಆಹಾರ ಬಹಳ ಮುಖ್ಯವಾಗಿ ಬೇಕು ಎನ್ನುವುದನ್ನು ಮಾನ್ಯ ಮಂತ್ರಿಗಳೂ ಒತ್ತಿ ಒತ್ತಿ ಹೇಳುವಾಗ ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳಕ್ಕೆ ವಿಶೇಷವಾಗಿ ಕಾಳಸಂತೆಯಲ್ಲಿ ಅಕ್ಕಿ ಹೋಗುತ್ತಿದೆ. ಅದನ್ನು ತಡೆಹಿಡಿದರೆ ಆಹಾರ ಸ್ವಲ್ಪ ಹೆಚ್ಚು ಉಳಿಯುಬಹುದು.

ಶ್ರೀ ಕೆ. ಪ್ರಭಾಕರ್ (ವರ್ತೂರು).—ದೇಶದ ಅನೇಕ ಕಡೆಗಳಲ್ಲಿ ಆಹಾರದ ಕಳ್ಳಸಾಗಾಣಿಕೆ ತಡೆಗಟ್ಟುವ ಕ್ಷೇತ್ರಗಳಲ್ಲಿ ಆಹಾರ ಪದಾರ್ಥಗಳು ಲಾಕಪ್ ಆಗಿ, ಡಿಪೋಗಳಲ್ಲಿ ಅಕ್ಕಿ ಇಲ್ಲ. ಅಲ್ಲಲ್ಲಿ ಹಿಡಿದಿಟ್ಟಿರುವ ಆಹಾರ ಪದಾರ್ಥಗಳು ಹೆಚ್ಚು ಪ್ರಮಾಣದಲ್ಲಿವೆ. ಅದನ್ನು ಉಪಯೋಗಕ್ಕೆ ಬಿಟ್ಟು ಕೊಡುವ ವ್ಯವಸ್ಥೆಯನ್ನು ಜಾಗ್ರತೆ ಮಾಡಿಕೊಡಬೇಕು.

ಬೋರವೆಲ್ ಯೂನಿಟ್‌ಗಳು ಎರಡು ಮೂರು ಏಜನ್ಸಿಗಳ ಕಡೆಗೆ ಹಂಚಿಹೋಗಿದೆ. ಅದನ್ನೆಲ್ಲ ಕೇಂದ್ರೀಕರಿಸಬೇಕು.

ರಿಲೀಫ್ ಕಾಂಗಾರಿಗಳಬಗ್ಗೆ ಸೆಂಟ್ರಲ್ ಸೆಲ್ ಎಂದು ಏನು ಮಾಡುತ್ತೀರಿ, ರಾಕೆಟ್ ಯೂನಿಟ್ ಎಂದು ಮಾಡಿ ಒಂದು ವಾಹನಕ್ಕೆ ಇಬ್ಬರು ಅಧಿಕಾರಿಗಳು ರಾತ್ರಿ ಹಗಲೂ ಕೆಲಸದ ಮೇಲೆ ಇರುವಂತೆ ಇಡಿ. ದನಕರುಗಳು ಬಂದರೆ ಚಕ್ಕನೆ ಹೋಗಿ ಚಕ್ಕನೆ ಹಿಡಿಯುವಂಥ ಅವಕಾಶ ಮಾಡಿಕೊಡಬೇಕು.

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕಿನಲ್ಲಿ ಸಾಧಾರಣವಾಗಿ ಬೇಸಾಯದ ಭೂಮಿಯೆಲ್ಲಾ ಅಕ್ವೈರ್ ಆಗಿ, ರೈತರಿಗೆ ಭೂಮಿ ಇಲ್ಲದೇ ಇರುವುದರಿಂದ, ಬೆಂಗಳೂರು ನಗರದಲ್ಲಿ ರೈತರಲ್ಲದವರಿಗೆ ಯಾವ ರೀತಿ ರೇಷನ್ ಕೊಡುವ ವ್ಯವಸ್ಥೆ ಇದೆಯೋ ಅದೇ ರೀತಿ ಮೇಲಿನ ಎರಡು ತಾಲ್ಲೂಕುಗಳಿಗೂ ಕೊಡಬೇಕು.

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಮಳೆಬಾರದೆ ಇರುವುದರಿಂದ ಬೇರೆಲ್ಲೂ ನೀರಿಲ್ಲ. ನದಿ ದಂಡೆಯಲ್ಲಿ ಮತ್ತು ನಾಲೆಗಳಲ್ಲಿ ನೀರಿದೆ. ನದಿ ದಂಡೆಮೇಲೆ ಪಂಪ್‌ಸೆಟ್ ಹಾಕಿ ನೀರೆತ್ತುವುದಕ್ಕೆ ಸಾಧ್ಯವಿದೆ. ಆ ಬಗ್ಗೆ ಯೋಗ್ಯ ಕಾರ್ಯಕ್ರಮ ಕೈಕೊಂಡು ಡೀಸೆಲ್ ಪಂಪ್‌ಸೆಟ್ ತೀವ್ರವಾಗಿ ಹಾಕುವ ಕೆಲಸ ಮಾಡಬೇಕು.

ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳು ಮಲೆನಾಡು ಭಾಗದಲ್ಲಿದ್ದರೂ ಅಭಾವ ಪರಿಸ್ಥಿತಿ ಇದೆ. ಈ ಭಾಗವನ್ನು ಉದಾಸೀನ ಮಾಡಬಾರದು. ಮೇಜರ್ ಇರಿಗೇಷನ್ ಹತ್ತು ವರ್ಷ ಒಂದೇ ಸಮನೆ ನಡೆಯುತ್ತಿದೆ. ಆ ಭಾಗದಲ್ಲಿ ಮೇಜರ್ ಇರಿಗೇಷನ್ ಆಗುತ್ತದೆ ಎಂದು ಮೈನರ್ ಇರಿಗೇಷನ್ ಕೆಲಸವನ್ನು ನಿಲ್ಲಿಸಿದ್ದಾರೆಂದು ಹೇಳುತ್ತಾರೆ. ದಯಮಾಡಿ ಮೈನರ್ ಇರಿಗೇಷನ್ ಕೆಲಸವನ್ನು ಮೊದಲು ತೆಗೆದುಕೊಳ್ಳಬೇಕು, ಮೇಜರ್ ಇರಿಗೇಷನ್ ಕೆಲಸ ಮಾಡುವುದಾದರೂ ಮೈನರ್ ಇರಿಗೇಷನ್ ಕೆಲಸ ಮುಂದುವರಿಯಬೇಕು.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳುತ್ತೇವೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಯಾವ ಯಾವ ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳ ಬಗ್ಗೆ ನಾವು ಪರಿಶೀಲನೆ ಮಾಡಿ ಯಾವ ಯಾವುದರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಅದರ ಮೇಲೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಮ್ಮ ಹತ್ತಿರ ಆಹಾರಧಾನ್ಯಗಳ ಸ್ಟಾಕ್ ಇದೆ ಎಂದು ಹೇಳಿದೆ. ಹಾಗೆ ಹೇಳಿದರೆ ಇವೊತ್ತಿನ ದಿವಸದ ಪರಿಸ್ಥಿತಿಗೆ ಅನುಗುಣವಾಗಿ ಏನು ಬಫರ್ ಸ್ಟಾಕ್ ಬಿಲ್ಡ್‌ಅಪ್ ಮಾಡಬೇಕೋ ಅಷ್ಟನ್ನು ಮಾಡಿದ್ದೇವೆ ಎಂದು ಮಾತ್ರ ಹೇಳುತ್ತಿದ್ದೇನೆ. ಪರಿಸ್ಥಿತಿ ಮುಂದೆ ಇನ್ನೂ ಹದಗೆಟ್ಟರೆ ಯಾವ ರೀತಿಯಿಂದ ಹೋಗಬೇಕು, ಕೇಂದ್ರ ಸರ್ಕಾರದಿಂದ ಎಷ್ಟು ಆಹಾರವನ್ನು ಹೆಚ್ಚು ತರಬೇಕು ಎಂಬುದನ್ನು ಪರಿಶೀಲನೆ ಮಾಡುತ್ತೇನೆ. ಪರಿಸ್ಥಿತಿಯನ್ನು ನೋಡುತ್ತಿರುವುದರಿಂದ ಪರೀಕ್ಷೆಮಾಡಿ ಮುಂದೆ ಹೋಗುತ್ತೇವೆ.

ಪ್ರತಿಯೊಬ್ಬರೂ ನಮ್ಮ ಜಿಲ್ಲೆಗೆ ಹೆಚ್ಚುಬೇಕು, ನಮ್ಮ ಜಿಲ್ಲೆಗೆ ಹೆಚ್ಚುಬೇಕು ಎಂದು ಆಹಾರ ಧಾನ್ಯದ ಬಗ್ಗೆ ಕೇಳುತ್ತಾರೆ. ನಮ್ಮ ಹತ್ತಿರ ಬಫರ್ ಸ್ಟಾಕ್ ಇದೆ ಎಂದು ಕೇಳಿದಷ್ಟನ್ನು ಕೊಡುವುದಕ್ಕಾಗುವುದಿಲ್ಲ. ಮಾರುಕಟ್ಟೆಯ ದರಕ್ಕಿಂತ ಸರ್ಕಾರದ ದರ ಕಡಮೆ ಇರುವುದರಿಂದ ಬ್ಲಾಕ್ ಮಾರ್ಕೆಟ್ಟಿಗೆ ಹೋಗುತ್ತದೆ. ಅದನ್ನೂ ವಿಚಾರ ಮಾಡಬೇಕಾಗುತ್ತದೆ. ಡೆಪ್ಯುಟಿ ಕಮಿಷನರುಗಳಿಗೆ, ಎಲ್ಲೆಲ್ಲಿ ಅವಶ್ಯಕತೆ ಇದೆಯೋ, ಅವರು ಏನು ಕೇಳುತ್ತಾರೆಯೋ ಅದನ್ನು ಕೊಡುವುದಕ್ಕೆ ತಯಾರಾಗಿದ್ದೇವೆ. ಈಗ ಎರಡು ತಿಂಗಳ ಹಿಂದೆ ಜೋಳ, ಗೋಧಿ ಏನು ಕೊಡುತ್ತಿದ್ದೆವೋ ಅದನ್ನು ನೂರಕ್ಕೆ ನೂರರಷ್ಟು ಹೆಚ್ಚು ಮಾಡಿದ್ದೇವೆ. ಚಿತ್ರದುರ್ಗ ಜಿಲ್ಲೆಯ ವಿಚಾರ ತೆಗೆದುಕೊಂಡರೆ 600 ಟನ್ ಇದ್ದುದನ್ನು 1000 ಟನ್‌ಗೆ ಹೆಚ್ಚು ಮಾಡಿದ್ದೇವೆ. ಅವಶ್ಯಕತೆ ಇದ್ದರೆ ಇನ್ನೂ ಹೆಚ್ಚು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎಮರ್ಜೆನ್ಸಿ ಫುಟಿಂಗ್ ಮೇಲೆ ಎಲ್ಲ ಜಿಲ್ಲೆಗಳಿಗೂ ಒಂದೇ ರೀತಿಯಾಗಿ ಕೊಡಬೇಕು ಎಲ್ಲ ಕಡೆಯೂ ಒಂದೇ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದರೆ ಹಾಗೆ ಮಾಡುವುದಕ್ಕಾಗುವುದಿಲ್ಲ. ಪರಿಸ್ಥಿತಿಗೆ ಅನುಗುಣವಾಗಿ ಎಲ್ಲಿ ಏನೇನು ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಕಂದಾಯ ಮತ್ತು ಇತರ ಬಾಕಿಯ ವಸೂಲಿ ಬಗ್ಗೆ ಈಗಾಗಲೇ ಹೇಳಿದ್ದೇನೆ. ಯಾವುದೇ ರೀತಿಯಲ್ಲಿ ಉಗ್ರ ಕ್ರಮಗಳನ್ನು ತೆಗೆದುಕೊಳ್ಳಬೇಡಿ, ಜನರ ಹತ್ತಿರ ಕೊಡುವ ಶಕ್ತಿ ಇದ್ದರೆ ತೆಗೆದುಕೊಳ್ಳಿ, ಯಾರಿಗೆ ಕೊಡುವುದಕ್ಕೆ ಶಕ್ತಿ ಇಲ್ಲ ಅಂಥವರಿಂದ ವಸೂಲು ಮಾಡಬೇಡಿ ಎಂದು ಹೇಳಿದ್ದೇವೆ. ವಸೂಲಿಯಲ್ಲಿ ಭಾರಿ ಶ್ರೀಮಂತರು ಮತ್ತು ದೊಡ್ಡ ದೊಡ್ಡ ನಾಯಕರು ಉಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಬಡವರು ಇಲ್ಲಿಯವರೆಗೂ ಕೊಡುತ್ತ ಬಂದಿದ್ದಾರೆ. ನಾಯಕರು ಎಂದು ಕರೆದುಕೊಳ್ಳುವವರು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಯಾರ ಹತ್ತಿರ ಶಕ್ತಿ ಇದೆಯೋ ಅಂಥವರಿಂದ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ, ಯಾರ ಹತ್ತಿರ ಶಕ್ತಿ ಇಲ್ಲ ಅಂಥವರ ಹತ್ತಿರ ತೆಗೆದುಕೊಳ್ಳುವುದು ಬೇಡ. ಕೋಯೆರ್ಸಿವ್ ಸ್ಟೆಪ್ಸ್ ತೆಗೆದುಕೊಳ್ಳುವುದು ಬೇಡ ಎಂದು ಎಲ್ಲ ಜಿಲ್ಲಾಧಿಕಾರಿಗಳಿಗೂ ಹೇಳಿದ್ದೇವೆ. ಪೂರ್ಣವಾದ ಅಧಿಕಾರವನ್ನು ಅವರಿಗೇ ಕೊಟ್ಟಿದ್ದೇವೆ.

ಪರಿಹಾರ ಕಾರ್ಯಗಳಿಗಾಗಿ ಕೊಡುವಂಥ ಹಣ ದುರುಪಯೋಗವಾಗುತ್ತದೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ರೀತಿ ಆಗದಂತೆ ನೋಡಿಕೊಳ್ಳಬೇಕಾದರೆ ನಿಮ್ಮ ಸಹಕಾರ ನಮಗೆ ಬೇಕಾಗುತ್ತದೆ. ಮೊನ್ನೆ ಒಬ್ಬ ವಿರೋಧಪಕ್ಷದ ಸದಸ್ಯರು ಬಂದಾಗ ಹೇಳಿದ, ಕಾನೂನು ಬಹಳ ಜಟಿಲವಾಗಿದೆ, ಪ್ರೊಸೀಜರ್ ಕಂಬರಸಂ ಆಗಿದೆ, ತಪ್ಪುಮಾಡಿದವರ ಮೇಲೆ ಕ್ರಮ ತೆಗೆದುಕೊಂಡರೆ ಕೋರ್ಟಿಗೆ ಹೋಗುತ್ತಾರೆ; ಕಾಂಪ್ಲಿಕೇಷನ್ ಆಗುತ್ತದೆ. ಆದಕಾರಣ ನೀವು ಎಲ್ಲೆಲ್ಲಿ ಹೇಗೆ ನಡೆಯುತ್ತಿದೆ ಎಂದು ತಿಳಿಸಿದರೆ ಮಾನ್ಯ ಹುಚ್ಚಮಾಸ್ತಿ ಗೌಡರು ಹೇಳಿದ ಹಾಗೆ ವಿಜಿಲೆನ್ಸ್ ಕಮಿಷನ್ ಮುಖಾಂತರ ಪರಿಶೀಲನೆ ಮಾಡಿಸಿ ರೇಡ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಲ್ಲ ಕಥೆಯೂ ಇದೇ ರೀತಿ ಆಗುತ್ತದೆ ಎಂದರೆ, ವಿಜಿಲೆನ್ಸ್ ಕಮಿಷನ್ ಭಯ ಅಧಿಕಾರಿಗಳಿಗೆ ಅಂಟಿಸಿದರೆ ಬಹುಶಃ ಕಾನೂನು ಪ್ರಕಾರ ಕೆಲಸ ಮಾಡಿ ಉಳಿದುಕೊಂಡರೆ ಸಾಕು ಎನ್ನುವಂಥಹ

(ಶ್ರೀ ವೀರೇಂದ್ರ ಪಾಟೀಲ್)

ಭಯ ಬಂದರೆ ಕೆಲಸಗಳು ನಿರೀಕ್ಷಿಸಿದ ಮಟ್ಟದಲ್ಲಿ ಮುಂದುವರಿಯದೆ ಹೋಗಿ ನಿರೀಕ್ಷಿಸಿದ ಮಟ್ಟದಲ್ಲಿ ರಿಲೀಫ್ ಜನಗಳಿಗೆ ಮುಟ್ಟುವುದಿಲ್ಲ. ಎಲ್ಲರೂ ಹಾಗೆಯೇ ಇರುತ್ತಾರೆ ಎಂದು ಲೆಕ್ಕ ಹಾಕದೆ ಎಲ್ಲಿ ಹಣ ದುರುಪಯೋಗವಾಗುತ್ತಿದೆ ಎಂಬುದನ್ನು ತಿಳಿಸಿದರೆ ಅಲ್ಲಿ ಅಂಥವರ ವಿಚಾರದಲ್ಲಿ ಉಗ್ರ ಕ್ರಮ ತೆಗೆದುಕೊಳ್ಳಬಹುದು. ನೀವೆಲ್ಲ ಸಹಾಯಮಾಡಿ ಯಾವುದೇ ರೀತಿಯ ರಿಪೋರ್ಟ್ ಅಥವಾ ದೂರು ಬಂದರೆ ಕ್ರಮ, ತೀವ್ರ ಕ್ರಮ ತೆಗೆದುಕೊಳ್ಳಲು ತಯಾರಿದ್ದೇನೆ.

ತಿಪ್ಪಗೊಂಡನಹಳ್ಳಿ ನೀರು ಅಥವಾ ಕಾವೇರಿ ನೀರು ಬೆಂಗಳೂರಿಗೆ ಬರುವ ವಿಚಾರ ಅಭಾವ ಪರಿಸ್ಥಿತಿಗೆ ಸಂಬಂಧಿಸಿದ್ದಲ್ಲ. ತಿಪ್ಪಗೊಂಡನಹಳ್ಳಿಯಲ್ಲಿ ಮಳೆ ಇಲ್ಲದೆ ನೀರು ಬರಲಾರದೆ ಹೋದರೆ ಎಲ್ಲಿಂದರಾದರೂ ತಂದು ತಿಪ್ಪಗೊಂಡನಹಳ್ಳಿ ರಿಸರ್ವಾಯರ್‌ಗೆ ನೀರು ತುಂಬುವುದಕ್ಕಾಗುವುದಿಲ್ಲ. ಅದಕ್ಕಾಗಿ ದೇವರಮೇಲೆ ನಂಬಿಕೆ ಇಟ್ಟು ನಡೆಯೋಣ ಮುಂದಿನ ಅಕ್ಟೋಬರ್ ತಿಂಗಳ ಒಳಗೆ ಪರಿಸ್ಥಿತಿ ಸುಧಾರಿಸದೆ ಹೋದರೆ ಮುಂದಿನ ಕಾರ್ಯಕ್ರಮ ನೋಡೋಣ. 8-10 ದಿವಸ ದಲ್ಲಿ ಹವಾ ಬದಲಾವಣೆ ಆಗುವಂಥ ಸನ್ನಿವೇಶ ಕಂಡುಬರುತ್ತಿದೆ. ಅದಕ್ಕಾಗಿ ಅಲ್ಲಿಯವರೆಗೆ ನಾವು ಈ ಎರಡೂವರೆ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ. ಆದರೆ ಒಂದು ಶಾಶ್ವತ ವಾದಂಥ ರಿಲೀಫ್ ಕೆಲಸ ಕೈಗೊಳ್ಳಬೇಕಾದರೆ 20 ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕಾಗುತ್ತದೆ. ಈ 20 ಕೋಟಿ ರೂಪಾಯಿ ಸಹಾಯವನ್ನು ಕೇಂದ್ರ ಸರ್ಕಾರದವರು ಕೊಡಬೇಕು. ಕೆಲವು ಮಾನ್ಯ ಸದಸ್ಯರು ಹೇಳಿದರು ಕೇಂದ್ರ ಸರ್ಕಾರದವರನ್ನು 50–60 ಕೋಟಿ ರೂಪಾಯಿಯನ್ನು ಏತಕ್ಕೆ ಕೇಳಬಾರದು ಎಂದು. ಕೇಂದ್ರ ಸರ್ಕಾರದವರೂ ಕೊಡಬೇಕಾದರೆ ತೆರಿಗೆ ಹಾಕಿ ಬಂದಂಥ ಹಣದಿಂದ ಸಾಲವನ್ನು ಕೊಡಬೇಕು. ಆದರೆ ನಮಗೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟನ್ನು ಸಾಲ ಪಡೆಯಬೇಕು ಎಂದು 20 ಕೋಟಿ ರೂಪಾಯಿಯನ್ನು ಮಾತ್ರ ಕೇಳಿದ್ದೇವೆ. ಅದರಂತೆ 20 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರದಿಂದ ಪಡೆಯುವ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ಲೆವಿ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಮಗೆ ಡೆಪ್ಯೂಟಿ ಕಮೀಷನ್‌ರವರಿಂದ ವರದಿ ಬಂದಮೇಲೆ ಇದರ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಲೆವಿ ಕೇಸ್ ಎಷ್ಟು ಹಾಕಿದ್ದಾರೆ, ಡಿಸರ್ವಿಂಗ್ ಕೇಸಸ್ ಏನಾದರೂ ಇದ್ದರೆ ವಾಪಸ್ ತೆಗೆದುಕೊಳ್ಳುವುದಕ್ಕೆ ವರದಿ ಬಂದಮೇಲೆ ಪರಿಶೀಲನೆ ಮಾಡುತ್ತೇನೆ. ಆದರೆ ಪೂರ್ತಿಯಾಗಿ ಕೇಸಸ್ ವಿತ್‌ಡ್ರಾ ಮಾಡುತ್ತೇನೆ ಎಂದು ಹೇಳುವುದಕ್ಕಾಗುವುದಿಲ್ಲ. ಸರ್ವೆ ಅಂಡ್ ರೀಸೆಟಲ್‌ಮೆಂಟ್ ಕೆಲಸ 5-6 ಸಾವಿರ ಹಳ್ಳಿಗಳಲ್ಲಿ ನಡೆಯುತ್ತಾ ಇದೆ. ರೀಸೆಟಲ್‌ಮೆಂಟ್ ಮುಗಿದು ಸೆಟಲ್‌ಮೆಂಟ್ ಆದರೆ ಈ 5–6 ಸಾವಿರ ಹಳ್ಳಿಗಳಿಗೆ ಪ್ರಯೋಜನವಾಗಬಹುದು. ಅದರಲ್ಲಿ ತರೀಕೆರೆ ಸಬ್‌ಡಿವಿಷನ್ ಸೇರಿರಬಹುದು ಎಂದು ಕಾಣುತ್ತದೆ. ಇದರಿಂದ 10, 20, 40 ಪಟ್ಟು ಲ್ಯಾಂಡ್ ರೆವಿನ್ಯೂ ಹೆಚ್ಚಾಗಿರುವುದನ್ನು ಕಡಿಮೆ ಮಾಡಲು ಅವಕಾಶ ಮಾಡುವ ದೃಷ್ಟಿಯಿಂದ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ಒಂದು ಅಮೆಂಡ್‌ಮೆಂಟ್ ತರಲು ಯೋಚಿಸಿದ್ದೇವೆ.

ಇನ್ನು ಪಾವಗಡ ತಾಲ್ಲೂಕ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದರು. ಈಗಾಗಲೇ ಅಲ್ಲಿಗೆ ಗಂಜಿ ಕೇಂದ್ರದ ವ್ಯವಸ್ಥೆಗಾಗಿ ಮೂರೂವರೆ ಲಕ್ಷ ರೂಪಾಯಿಯನ್ನು ಮಂಜೂರು ಮಾಡಿದ್ದೇವೆ. ಕುಡಿಯುವ ನೀರನ್ನು ಸರಬರಾಯಿ ಮಾಡಲು ಅದಕ್ಕೆ ಹಣ ಖರ್ಚು ಮಾಡುವ ಅಧಿಕಾರ ಕೊಟ್ಟಿದ್ದೇವೆ. ಬೋರಿಂಗ್ ಮೆಷಿನ್ ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂಥಾದ್ದು ಎಷ್ಟರಮಟ್ಟಿಗೆ ಸಫಲವಾಗುತ್ತದೆ ಎಂದು ನೋಡಿ ಆ ರೀತಿ ವ್ಯವಸ್ಥೆ ಮಾಡು ತ್ತೇವೆ. ನಾವು ಪ್ರಕೃತಿ ವಿಕೋಪಕ್ಕೆ ಒಳಗಾಗಿದ್ದೇವೆ. ಸಂಪೂರ್ಣವಾಗಿ ನೂರಕ್ಕೆ ನೂರು ಪರ್ಸೆಂಟು ಅನುಕೂಲವನ್ನು ಸರ್ಕಾರದವರೇ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಸ್ವಲ್ಪಮಟ್ಟಿಗೆ ಜನರ ಸಹಾಯವೂ ಬೇಕಾಗಿದೆ. ಎಷ್ಟು ಪ್ರಮಾಣದಲ್ಲಿ ಸಹಾಯ ಮಾಡಲಿಕ್ಕೆ ಸಾಧ್ಯವೋ ಅಷ್ಟನ್ನ ಸರ್ಕಾರ ಮಾಡಬಹುದು. ಆದುದರಿಂದ ಮಾನ್ಯ ಸದಸ್ಯರು ಸಹಕಾರ ನೀಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಡಲಿಲ್ಲ. ನಾವು ಹಾಕಿದ ಪ್ರಶ್ನೆಗೆ ಸರಿಯಾದ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳನ್ನು ಬೆಲೆ ಏರಿಕೆ ಬಗ್ಗೆ ಕೇಳಿದೆ ಅದಕ್ಕೂ ಉತ್ತರ ಇಲ್ಲ.

MR. SPEAKER.—I shall now put the motion to vote of the House. The question is:

"Having taken into account the acute scarcity conditions in 17 out of the 19 Districts of the State and the efforts made so far to provide relief, the House resolves that in view of the grave deterioration of the conditions, the scale of relief operations has to be stepped up very considerably and quickly. The scope and nature of these operations have to be widened. The Central assistance of Rs. 2.5 crores made on the basis of the assessment of the situation in June 1968 is grossly inadequate to meet the greatly worsened position today. It further resolves that to meet even the minimum demands of the situation, Central assistance of Rs. 20 crores would be definitely required as distress conditions will not abate before the next monsoon *viz.*, June 1969. The Government of India may be approached in the matter.

The purposes for which these grants can be expended should include not only works which provide immediate relief and employment but also measures to provide permanent relief and insurance against appearance of distress as a result of failure of monsoons."

*The motion was adopted.*

MR. SPEAKER.—The House will now rise and meet again at 4-15 P.M.

*The House adjourned at Forty-five Minutes past Three of the Clock and re-assembled at Twenty-five Minutes past Four of the Clock.*

[MR. DEPUTY SPEAKER in the Chair]

## PRIVATE MEMBERS' BUSINESS

### (i) LEAVE TO INTRODUCE THE MYSORE CO-OPERATIVE SOCIETIES (AMENDMENT) BILL, 1968

SRI K. H. PATIL.—Sir, I beg leave of this House to introduce the Mysore Co-operative Societies (Amendment) Bill, 1968.

MR. DEPUTY SPEAKER.—Has the House its leave to the Member to introduce the Mysore Co-operative Societies (Amendment) Bill, 1968?

SOME HON. MEMBERS.—Yes.

SRI B. L. GOWDA (Deputy Minister for Co-operation).—Sir, I oppose.